ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 | ಸಂಚಿಕೆ 44 | ನವೆಂಬರ್ 1, 1981 | ಬೆಲೆ : 60 ಪೈಸೆ

ರಾಜ್ಯೋತ್ಸವ

ನವೆಂಬರ್ 1ರಂದು ನಮ್ಮ ರಾಜ್ಯದಲ್ಲೆಲ್ಲ ರಾಜ್ಯೋತ್ಸವವು ಆಚರಿಸಲ್ಪಡುತ್ತದೆ. ಈ ಸಲದ ರಾಜ್ಯೋತ್ಸವಕ್ಕೆ ವಿಶೇಷ ಮಹತ್ವವಿದೆ. ಕರ್ನಾಟಕ ಏಕೀಕರಣವಾಗಿ 25 ವರ್ಷ ತುಂಬಿರುವ ಈ ಸಂದರ್ಭದಲ್ಲಿ ಇದನ್ನು ರಜತ ಮಹೋತ್ಸವವೆಂದು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಗುವುದು.

ನವೆಂಬರ್ ಒಂದರ ಮಹತ್ವವನ್ನು ತಿಳಿಯುವುದು ಅಗತ್ಯ. 1956 ನವೆಂಬರ್ ಒಂದರ ತನಕ ಕನ್ನಡಿಗರು ಹಲವಾರು ಆಡಳಿತೆಗಳಲ್ಲಿ ಹಂಚಿ ಹೋಗಿದ್ದರು. ದ. ಕನ್ನಡ ಮತ್ತು ಬಳ್ಳಾರಿ ಜಿಲ್ಲೆಗಳು ಮದ್ರಾಸ್ ಪ್ರಾಂತದಲ್ಲೂ, ಉತ್ತರ ಕನ್ನಡ, ಧಾರವಾಡ, ಬೆಳಗಾಂ ಮತ್ತು ಬಿಜಾಪುರ, ಜಿಲ್ಲೆಗಳು ಬೊಂಬಾಯಿ ಪ್ರಾಂತದಲ್ಲೂ, ಗುಲ್ಬರ್ಗಾ, ಬೀದರ್ ಮತ್ತು ರಾಯಚೂರು ಜಿಲ್ಲೆಗಳು ಹೈದರಾಬಾದ್ ಸಂಸ್ಥಾನದಲ್ಲೂ ಇದ್ದುವು. ಕೊಡಗು ಪ್ರತ್ಯೇಕವಾಗಿಯೂ ಮತ್ತು ಹಳೆ ಮೈಸೂರು (ಅಂದರೆ ಕೋಲಾರ, ಬೆಂಗಳೂರು, ತುಮಕೂರು, ಚಿತ್ರದುರ್ಗ, ಮೈಸೂರು, ಶಿವಮೊಗ್ಗ, ಚಿಕ್ಕಮಗಳೂರು, ಮಂಡ್ಯ ಮತ್ತು ಹಾಸನ ಜಿಲ್ಲೆಗಳು ಸೇರಿ) ಪ್ರತ್ಯೇಕ ಸಂಸ್ಥಾನವಾಗಿಯೂ ಇದ್ದುವು. ಸಣ್ಣಪುಟ್ಟ ಸಂಸ್ಥಾನಗಳೂ ಹಲವಿದ್ದುವು. ನಮ್ಮ ಹಾಗೆಯೇ ಆಂಧ್ರ, ಕೇರಳದವರೂ ವಿವಿಧ ಆಡಳಿತೆಗಳಲ್ಲಿ ನರಳುತ್ತಿದ್ದರು. ಇದು ಬ್ರಿಟಿಷ್ ಆಡಳಿತಗಾರರ ಕುತಂತ್ರವಾಗಿತ್ತು. ಬಹು ಭಾಷಾ ಪ್ರಾಂತಗಳಿದ್ದರೆ ಎಲ್ಲರೂ ತಮ್ಮ ವಿರುದ್ಧ ಒಂದುಗೂಡುವುದನ್ನು ತಪ್ಪಿಸಬಹುದೆಂಬ ಉದ್ದೇಶದಿಂದ ಅವರು ಈ ತಂತ್ರವನ್ನು ಉಪಯೋಗಿಸಿದ್ದರು. ಇದರಿಂದ ಜನತೆಯ ಅಭಿವೃದ್ಧಿಗೂ, ಭಾಷೆಗಳ ಬೆಳವಣಿಗೆಗೂ ಅಡ್ಡಿಯಾಯಿತು. ಇದರ ಜೊತೆಗೆ 1920ರ ನಂತರ ದೇಶದ ಸ್ವಾತಂತ್ರ ಹೋರಾಟವು ಸಾಮೂಹಿಕ ಸ್ವರೂಪ ತಾಳಲಾರಂಭಿಸಿದಾಗ ಭಾಷಾವಾರು ಪ್ರಾಂತ ರಚನೆಯ ಪ್ರಶ್ನೆ ಮುಂದೆ ಬಂತು. ಕಾಂಗ್ರೆಸ್ ಈ ಬೇಡಿಕೆಯನ್ನು ಅಂಗೀಕರಿಸಿತು.

ದೇಶಕ್ಕೆ 1947ರಲ್ಲಿ ಸ್ವಾತಂತ್ರ್ಯ ದೊರೆತ ನಂತರ ರಾಜ್ಯಗಳ ಪುನರ್ವಿಂಗಡನೆಯಾಗಿ ವಸಾಹತು ಪದ್ಧತಿಯ ಅವಶೇಷಗಳು ಕೊನೆಗೊಳ್ಳುವುವೆಂದು ಜನತೆ ನಿರೀಕ್ಷಿಸುತ್ತಿತ್ತು. ಆದರೆ ಹಿರಿ ಗುತ್ತೇದಾರಿ–ಜಮೀನ್ದಾರಿಗಳ ನೇತೃತ್ವದಲ್ಲಿದ್ದ ಸರಕಾರ ಇದನ್ನು ಮಾಡದ್ದರಿಂದ ಇದಕ್ಕೆ ಉಗ್ರವಾದ ಚಳವಳಿಯನ್ನು ನಡೆಸಬೇಕಾಯಿತು. ಇದಕ್ಕೆ ಪ್ರಥಮ ಹೆಜ್ಜೆಯಾಗಿ ಎಲ್ಲ ಸಂಸ್ಥಾನಗಳಲ್ಲೂ ಜವಾಬ್ದಾರಿ ಸರಕಾರ ಬರಬೇಕೆಂದು ಹೋರಾಟ ನಡೆಸಬೇಕಾಯಿತು. ಆದರ ನಂತರ ಭಾಷೆಗಳ ಆಧಾರದಲ್ಲಿ ಪ್ರಾಂತಗಳ ಪುನರ್ವಿಂಗಡನೆಯಾಗಬೇಕೆಂದು ಹೋರಾಟ ನಡೆಯಿತು. ಆಂಧ್ರದಲ್ಲಿ ಶ್ರೀ ಪೊಟ್ಟಿ ಶ್ರೀರಾಮುಲುರವರು ಆಮರಣ ಉಪವಾಸ ಮಾಡಿ ಮಡಿದರು. ಅವರ ನಿಧನದಿಂದ ಮದ್ರಾಸ್‌ನಲ್ಲಿದ್ದ ಆಂಧ್ರದ ಜಿಲ್ಲೆಗಳಲ್ಲಿ ಹೋರಾಟ ತೀವ್ರಗೊಂಡ ಪರಿಣಾಮವಾಗಿ 1954ರಲ್ಲಿ ಆಂಧ್ರ ಪ್ರಾಂತ ಅಸ್ತಿತ್ವಕ್ಕೆ ಬಂತು. ಕರ್ನಾಟಕ ಮತ್ತಿತರ ಕಡೆಗಳಲ್ಲೂ ಜನತೆಯ ಚಳವಳಿ ತೀವ್ರಗೊಂಡ ಪರಿಣಾಮವಾಗಿ ಕೇಂದ್ರ ಸರಕಾರ ಫಜಲ್ ಆಲಿಯವರ ಅಧ್ಯಕ್ಷತೆಯಲ್ಲಿ ಮೂರು ಜನರ ಸಮಿತಿಯನ್ನು ನೇಮಿಸಿತು. ಈ ಸಮಿತಿ ವಿಳಂಬವಾಗಿಯಾದರೂ ವರದಿ ಸಲ್ಲಿಸಿ ಕರ್ನಾಟಕ ರಾಜ್ಯದ ರಚನೆಗೆ ಶಿಫಾರಸು ಮಾಡಿತು. ಇದರ ಆಧಾರದಲ್ಲಿ ಹೊಸ ಶಾಸನವನ್ನು ಕೇಂದ್ರ ಸರಕಾರ ಸಂಸತ್ತಿನಲ್ಲಿ ಮುಂದೆ ತಂದಾಗ ಮಿಶ್ರ ಪ್ರತಿಕ್ರಿಯೆ ಬಂತು. ಇದನ್ನು ವಿರೋಧಿಸುವವರೂ ಕೆಲವರಿದ್ದರು. ಆದರೂ ಕೊನೆಗೆ ಇದು ಜಾರಿಗೆ ಬಂತು.

ಕರ್ನಾಟಕ ರಾಜ್ಯ ಬಂದರೂ ಅದರ ಹೆಸರು ಮೈಸೂರೆಂದೇ ಉಳಿಯಿತು. ಅದನ್ನು ಬದಲಾಯಿಸಬೇಕೆಂದು ಒತ್ತಾಯ ಬಂದ ನಂತರ ಕೊನೆಗೆ ಕರ್ನಾಟಕವೆಂದು ನಾಮಕರಣವಾಯಿತು. ಹೀಗೆ ಕರ್ನಾಟಕ ರಾಜ್ಯ ಅಸ್ತಿತ್ವಕ್ಕೆ ಬರಲು ದೀರ್ಘ ಹೋರಾಟ ನಡೆದಿದೆ. ಸಹಸ್ರಾರು ಜನರು ಜೈಲಿಗೆ ಹೋಗಿ ಕಷ್ಟನಷ್ಟಗಳನ್ನು ಅನುಭವಿಸಬೇಕಾಯಿತು.

ಕನ್ನಡಿಗರೆಲ್ಲ ಒಂದಾಗಬೇಕೆಂದು ಕನ್ನಡ ರಾಜಕಾರಣಿಗಳೂ ಮತ್ತು ಸಾಹಿತಿಗಳೂ ಮೊದಲಿಂದಲೂ ಒತ್ತಾಯಿಸುತ್ತಿದ್ದರು. ಇದು ಎಲ್ಲ ಜನವಿಭಾಗದ ಜನತೆಯದ್ದೂ ಬೇಡಿಕೆಯಾಗಿತ್ತು.

ಆದರೆ ಕೆಲವರು ತಮ್ಮ ಸಂಕುಚಿತ ದೃಷ್ಟಿಯಿಂದ ಇದನ್ನು ವಿರೋಧಿಸಿದರು. ಹಳೇಮೈಸೂರು ಹಾಗೆನೇ ಮುಂದುವರಿದರೆ ಒಕ್ಕಲಿಗರು ಬಹುಮತದಲ್ಲಿದ್ದುದರಿಂದ ಏಕೀಕರಣವಾದರೆ ಲಿಂಗಾಯತರ ಬಹುಮತ ಬಂದು ಆಡಳಿತೆ ಅವರದ್ದೇ ಆಗಬಹುದೆಂಬ ಭಯ ಅವರಲ್ಲಿತ್ತು. ಈ ಅಂಶವನ್ನು ಫಜಲ್ ಆಲಿಯವರೂ ಮೊದಲೇ ಹೇಳಿದ್ದಾರೆ. ಇದು ಅಂದಿನ ಸಾಮಾಜಿಕ ರಾಜಕೀಯ ಪರಿಸ್ಥಿತಿಯಲ್ಲಿ ತೋರಿಕೆಗೆ ವಾಸ್ತವವಾಗಿದ್ದರೂ ದೇಶದಲ್ಲಿ ಪ್ರಜಾಪ್ರಭುತ್ವ ಶಕ್ತಿಗಳು ಬೆಳೆದಾಗ ಈ ಅಂಶ ಹಿಂದೆ ಬೀಳುವುದು ಖಂಡಿತವಾಗಿತ್ತು. 1969ರಲ್ಲಿ ನಮ್ಮ ರಾಜ್ಯದಲ್ಲೂ

(ಕಡೇ ಪುಟ ನೋಡಿ)



ರಾಜ್ಯೋತ್ಸವದ ಬೆಳ್ಳಿಹಬ್ಬದ ಶುಭಸಂದರ್ಭದಲ್ಲಿ ನಾಡ ಜನತೆಗೆ ಪಕ್ಷದ ಹಾರ್ದಿಕ ಅಭಿನಂದನೆಗಳು

ಕರ್ನಾಟಕದಲ್ಲಿ ರೈತಸಂಘಟನೆಯ ಆರಂಭದ ಘಟ್ಟಗಳ ಕುರಿತು ಕೆಲವು ವಿಚಾರಗಳು

ಪಿ. ರಾಮಚಂದ್ರರಾವ್

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೈತ ಸಂಘಟನೆಗೆ 35-40 ವರ್ಷಗಳ ಪರಂಪರೆ ಇದೆ. ಕೇರಳದಲ್ಲಿ ಮಲಬಾರ ಜಿಲ್ಲೆಗಳಲ್ಲಿ ಜೆಮ್ಮಿ (ಜಮೀನ್ದಾರರು)ಗಳ ವಿರುದ್ಧ ತೀವ್ರ ಹೋರಾಟಗಳು 30ರ ದಶಕದಲ್ಲಿ ಆರಂಭವಾಯಿತಷ್ಟೆ. ಮಲಬಾರಿಗೆ ತಾಗಿದ್ದ ಹಾಗೂ ಮಲಬಾರಿನಂತೆ ಮದ್ರಾಸ್ ಪ್ರಾಂತದ ಕೊನೆಯ ಜಿಲ್ಲೆಯಾದ ದಕ್ಷಿಣ ಕನ್ನಡದಲ್ಲೂ ಜಮೀನ್ದಾರರ ವಿರುದ್ಧ 40ರ ದಶಕದಲ್ಲಿ ಪ್ರತಿಭಟನೆಗಳು ನಡೆದವು. ಮುಖ್ಯವಾಗಿ ಕಾರ್ಮಿಕರ ನೇತೃತ್ವ ಹಾಗೂ ಕಮ್ಯುನಿಸ್ಟ್ ಪಾರ್ಟಿಯ ಶಾಖೆಗಳು ಇದ್ದ ಮಂಗಳೂರು ತಾಲ್ಲೂಕಿನಲ್ಲಿ ಈ ಪ್ರತಿಭಟನೆ, ಪ್ರಕ್ಷೋಭೆ, ಚಳುವಳಿ ನಡೆಯಿತು. ಜಮೀನ್ದಾರರ ದಬ್ಬಾಳಿಕೆ ಮತ್ತು ಪಾಳೆಯಗಾರೀ ವರ್ತನೆಯೇ ಈ ಘಟ್ಟದಲ್ಲಿ ರೈತರು ಎಚ್ಚರವಾಗಲು ಹಾಗೂ ಅಲ್ಪಸ್ವಲ್ಪ ಸಂಘಟನೆಯಾಗಲು ಪ್ರಚೋದನೆಯಾಯಿತು. ಕಯ್ಯೂರಿನ ಘಟನೆಗಳು, ತೆಲಂಗಾಣಾದ ಹೋರಾಟ ಇವೆಲ್ಲಾ ಸ್ಫೂರ್ತಿಯನ್ನಿತ್ತವು.

ಮದ್ರಾಸು ರಾಜ್ಯದಲ್ಲಿ ಒಂದನೇ ಚುನಾವಣೆಯಲ್ಲಿ ವಿರೋಧ ಪಕ್ಷಗಳನ್ನೊಳಗೊಂಡ ಸಂಯುಕ್ತ ಪ್ರಜಾಸತ್ತಾತ್ಮಕರಂಗ ಗಣನೀಯಶಕ್ತಿಯಿಂದ ಗೆದ್ದುದರ ಪರಿಣಾಮವಾಗಿ ಈ ರಂಗದ ವಿಜಯಕ್ಕೆ ಮದರಾಸ್ ಪ್ರಾಂತದ ಹಲವಾರು ಭಾಗಗಳ ರೈತರು ಕಾರಣವಾದುದರಿಂದಲೂ, ಗೇಣಿ ಕಡಿಮೆಯಾಗಬೇಕು, ನ್ಯಾಯಗೇಣಿ ನಿರ್ಧರಿಸಲ್ಪಡಬೇಕು, ಒಕ್ಕಲೆಬ್ಬಿಸಬಾರದು, ಒಕ್ಕಲಿಗೆ ಶಾಶ್ವತ ಹಕ್ಕನ್ನು ಕೊಡಬೇಕು, ಒಟ್ಟಿ ಜೀಗಾರಿ (ಕೂಲಿ) ನಿಲ್ಲಬೇಕು, ಕೊಟ್ಟ ಗೇಣಿಗೆ ರಸೀದಿ ಸಿಗಬೇಕು ಎಂಬಿತ್ಯಾದಿ ಹಲವಾರು ಪ್ರಾಥಮಿಕ ಘೋಷಣೆಗಳ ಆಧಾರದಲ್ಲಿ ಪ್ರಕ್ಷೋಭೆ ಸಂಘಟಿಸಲ್ಪಟ್ಟ ಕಾರಣದಿಂದಲೂ, ಮದರಾಸು ಪ್ರಾಂತದಲ್ಲಿ ನ್ಯಾಯಗೇಣಿ ಕಾನೂನು ಕಾನೂನಾಗಿ ಬಂದಿತು. ಈ ಕಾನೂನಿನ ಜಾರಿಗಾಗಿ ನಡೆದ ರೈತರ ಚಳುವಳಿಯೇ ದಕ್ಷಿಣ ಕನ್ನಡ ಜಿಲ್ಲೆಯ ರೈತ ಸಂಘಟನೆಯ ಎರಡನೆಯ ಘಟ್ಟ.

ಮಂಗಳೂರು ಮತ್ತು ಬಂಟ್ವಾಳ ತಾಲ್ಲೂಕುಗಳಲ್ಲಿ ಈ ಪ್ರಕ್ಷೋಭೆ ವಿಸ್ತೃತವಾಗಿ ನಡೆಯಿತು. ಹಳ್ಳಿಹಳ್ಳಿಗಳಲ್ಲಿ ರೈತರ ಸಮಿತಿಗಳು ರಚಿತವಾದವು. ತಾಲ್ಲೂಕು ರೈತಸಂಘಗಳು ಹುಟ್ಟಿದವು. ನ್ಯಾಯಗೇಣಿ ತೀರ್ಮಾನ ಮಾಡುವ ಸಲುವಾಗಿ ರೈತರ ಪ್ರತ್ಯೇಕ ಪ್ರತ್ಯೇಕ ಗೇಣಿ ಭೂಮಿ ಅಳೆಯುವ ಕೆಲಸ ವಿಸ್ತೃತವಾಗಿ ನಡೆಯಿತು. ಈ ಕೆಲಸದಲ್ಲಿ ಮತ್ತು ನ್ಯಾಯಗೇಣಿ ಕೋರ್ಟುಗಳಲ್ಲಿ (ಗೇಣಿ ನಿರ್ಣಯಿಸಲು ತಾಲ್ಲೂಕು ಕೇಂದ್ರಗಳಲ್ಲಿ ಪ್ರತ್ಯೇಕ ಕೋರ್ಟುಗಳನ್ನು ವ್ಯವಸ್ಥೆ ಮಾಡಲಾಗಿತ್ತು. ಈ ಕೋರ್ಟುಗಳಲ್ಲಿ ವಕೀಲರ ಬದಲಾಗಿ ರೈತಸಂಘದ ಪ್ರತಿನಿಧಿಗಳು ವಾದಮಾಡಲು ಅವಕಾಶವಿತ್ತು) ರೈತರ ವಾದಗಳನ್ನು ಮಂಡಿಸುವ ಕೆಲಸದಲ್ಲಿ ಹಲವು ರೈತ ಕಾರ್ಯಕರ್ತರು, ರೈತ ಮುಂದಾಳುಗಳು ಬೆಳೆದುಬಂದರು. ಜಮೀನ್ದಾರರ ವಿರುದ್ಧದ ಹೋರಾಟವು ಅದೇ ಸಮಯದಲ್ಲಿ ಮುಂದುವರೆಯುತ್ತಾ ಬಂದಿತು. ರೈತಸಂಘವೂ ಬಲಿಷ್ಠವಾಗುತ್ತಾ ಬಂದಿತು. ಈ ಸಮಯದಲ್ಲಿ ಜಿಲ್ಲಾ ರೈತರ ಸಮ್ಮೇಳನಗಳು ಬಂಟ್ವಾಳ, ಮಂಗಳೂರುಗಳಲ್ಲಿ ಯಶಸ್ವಿಯಾಗಿ ನಡೆದು 1956-57ರಲ್ಲಿ ನಡೆದ ಸಮ್ಮೇಳನದಲ್ಲಿ ಶ್ರೀ ಕೃಷ್ಣಶೆಟ್ಟರ ಅಧ್ಯಕ್ಷತೆಯಲ್ಲಿ ಜಿಲ್ಲಾ ರೈತಸಮಿತಿಯು ಆರಿಸಲ್ಪಟ್ಟಿತು. ಆಗ ಕರ್ನಾಟಕ ರಾಜ್ಯ ರಚಿಸಲ್ಪಟ್ಟಿದ್ದರಿಂದ, ಕರ್ನಾಟಕದ ಇತರ ಭಾಗಗಳಲ್ಲಿ ರೈತರ ಚಳುವಳಿ ಬೆಳೆದು ಬರುತ್ತಿದ್ದುದರಿಂದ, ಈ ಸಮ್ಮೇಳನದ ಸಮಯದಲ್ಲೇ ಪ್ರಾಂತ ರೈತಸಂಘದ ರಚನೆಗೆ ಪೀಠಿಕೆ ಹಾಕಲಾಯಿತು. ಪ್ರಾಂತ ರೈತ ಸಮ್ಮೇಳನವನ್ನು ಸಂಘಟಿಸುವ ಸಲುವಾಗಿ ಒಂದು ಸಂಘಟನಾ ಸಲುವಾಗಿ ಒಂದು ಸಂಘಟನಾ ಸಮಿತಿ ಏರ್ಪಟ್ಟಿತು. ಅದರ ನೇತೃತ್ವದಲ್ಲಿ 1957ರಲ್ಲಿ ಬೆಂಗಳೂರಿನಲ್ಲಿ ಕರ್ನಾಟಕದ ಪ್ರಥಮ ರೈತ ಸಮ್ಮೇಳನವು ಜರುಗಿ "ಕರ್ನಾಟಕ ಪ್ರಾಂತ ರೈತಸಂಘವು" ಉದಯವಾಯಿತು.

ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ, ಮುಖ್ಯವಾಗಿ ಕಾರವಾರ ಜಿಲ್ಲೆಯಲ್ಲಿ ರೈತರ ತೀವ್ರ ಹೋರಾಟಗಳು 1948-59ರ ಕಾಲಘಟ್ಟದಲ್ಲಿ ನಡೆದು ಮುಂದೆ ಮುರಾರ್ಜಿ ಸರಕಾರವು ತೀವ್ರ ಭೂಸುಧಾರಣೆ ಕಾನೂನು (ಬಾಂಬೈ-ಟೆನೆನ್ಸಿ ಕಾನೂನು) ಬರುವಂತೆ ಒತ್ತಾಯ ತರಲು ಸಮರ್ಥವಾದವು.

ದಕ್ಷಿಣ ಕನ್ನಡ ಜಿಲ್ಲೆಯಲ್ಲೂ, ಪ್ರಾಂತದಲ್ಲೂ ರೈತಸಂಘವು ಬೆಳೆದು ಬರತೊಡಗಿತು. ನಮ್ಮ ರೈತಸಂಘ ಅಖಿಲಭಾರತ ಕಿಸಾನ್ ಸಭಾಕ್ಕೆ ಸೇರ್ಪಡೆಯಾಗಿ ನಮ್ಮ ಪ್ರತಿನಿಧಿಗಳು ಎ.ಐ.ಕೆ.ಎಸ್.ನಲ್ಲಿ ಭಾಗವಹಿಸುವಂತಾಯಿತು.

50ನೇ ದಶಕದ ಕೊನೆಯಲ್ಲಿ ಮತ್ತು 60ರ ದಶಕದಲ್ಲಿ ರೈತಸಂಘಟನೆಯ ಮೂರನೇ ಘಟ್ಟ ಆರಂಭವಾಯಿತು. ಈ ಘಟ್ಟವು "ಸಮಗ್ರ ಭೂಸುಧಾರಣೆ"ಯ ಘೋಷಣೆಯಡಿಯಲ್ಲಿ ಆರಂಭವಾಯಿತು ಚಳುವಳಿಯು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಸ್ತೃತವಾಗಿ ಇತರ ತಾಲ್ಲೂಕುಗಳಿಗೂ-ಬೆಳ್ತಂಗಡಿ, ಉಡುಪಿ, ಕುಂದಾಪುರ ಮತ್ತು ಪುತ್ತೂರುಗಳಿಗೆ ಹರಡಿತು. ದೇಶದ ಕೆಲವು ರಾಜ್ಯಗಳಲ್ಲಿ ಜಮೀನ್ದಾರಿ ರದ್ದತಿ ಕಾನೂನುಗಳೂ, ಭೂಸುಧಾರಣೆ ಕಾನೂನುಗಳೂ ಪಾಸಾದವು. ನಮ್ಮ ರಾಜ್ಯದಲ್ಲೂ ಇನಾಂ ರದ್ದತಿ ಕಾನೂನು ಪಾಸಾಯಿತು. ಇವೆಲ್ಲದರ ಪ್ರಭಾವದ ಜೊತೆಯಲ್ಲಿ ಚುನಾವಣೆಗಳ ವೇಳೆ ಕಾಂಗ್ರೆಸ್ ಕೂಡಾ ಭೂಸುಧಾರಣೆ ತರುವ ಅವಶ್ಯಕತೆಯ ಬಗ್ಗೆ ಘೋಷಣೆ ಕೊಟ್ಟಿತು. 1960ರಲ್ಲಿ "ಜತ್ತಿಸಮಿತಿ" ನಿಯಮಿತವಾಗಿ ಅದು ರಾಜ್ಯದಾದ್ಯಂತ ಪ್ರವಾಸಮಾಡಿ ಸಮಸ್ತ ವರದಿ ತಯಾರಿಸಿತು. ಈ ವೇಳೆ ರಾಜ್ಯದ ರೈತ ಸಂಘಗಳಿಂದ ಈ ಸಮಿತಿಗೆ ಮನವಿ ಕೊಡುವ ಕೆಲಸ ನಡೆಯಿತು. ಪ್ರಚಾರ ಪ್ರಕ್ಷೋಭೆ ಹೆಚ್ಚಾಯಿತು. ಭೂಮಾಲೀಕರೂ ಸಂಘಟನೆಯಾಗಿ ಈ ಕಾನೂನು ಬಾರದಂತೆ ಪ್ರಚಾರ ನಡೆಸುತ್ತಾ ಬಂದರು. ಒಟ್ಟಿನಲ್ಲಿ ಆ ಮೇಲೆ ಕರಡು ವರದಿ ಬಂದಾಗ ಅದಕ್ಕೆ ತಿದ್ದುಪಡಿಗಳನ್ನು ಕೊಡುವ ಮತ್ತು ಒತ್ತಾಯಿಸುವ ಚಳುವಳಿಗಳು ನಡೆದವು. ರೈತ ಸಂಘದ ಅಧ್ಯಕ್ಷ ಕಾಂ. ಕೋಲಾರ ಜಿಲ್ಲೆಯಲ್ಲಿ ಗಂಗೀರೆಡ್ಡಿಯವರೂ, ರಾಜಗೋಪಾಲ ಮತ್ತಿತರರು ಎಂ. ಎಲ್. ಎ.ಗಳಾಗಿ ರೈತರ ಬೆಂಬಲದಿಂದ ಆರಿಸಲ್ಪಟ್ಟರು.

1965 ಅಕ್ಟೋಬರ 2ರಂದು ಭೂಧಾರಣೆ ಜಾರಿಬಂದು ಪ್ರಕಟಿಸಲಾಯಿತು. ಆದರೆ ಅದು ಜಾರಿಗೆ ಬರಲು ಯಾವದೇ ಕ್ರಮಗಳನ್ನು ಸರಕಾರ ವರ್ಷಗಟ್ಟಲೇ ಕೈಗೊಳ್ಳಲಿಲ್ಲ.

ಕೇರಳದಲ್ಲಿ 1957-58ರಲ್ಲಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಸರಕಾರವು ಆಡಳಿತಕ್ಕೆ ಬಂದು ಭೂಸುಧಾರಣಾ ಕಾನೂನನ್ನು ರೂಪಿಸಲು ಆರಂಭಿಸಿತು. ಕೇರಳ ಸರ್ಕಾರದ ಕ್ರಮಗಳು ಕರ್ನಾಟಕದ ಮುಖ್ಯವಾಗಿ ದ. ಕ. ಜಿಲ್ಲೆಯ ಚಳುವಳಿಗಳಿಗೂ ಒತ್ತಾಸೆ ಕೊಟ್ಟಿತು. ಕೇರಳದಲ್ಲಿ ಕಾನೂನು ಜಾರಿಯಾಗಿ ಎಷ್ಟೋ ವರ್ಷಗಳ ನಂತರ 1947ರ ಮಾರ್ಚಿನಲ್ಲಿ ಕರ್ನಾಟಕದಲ್ಲಿ ಭೂಸುಧಾರಣೆಯ ಕಾಯ್ದೆ ಕೆಲವೊಂದು ತಿದ್ದುಪಡಿಗಳ ಮೂಲಕ ಜಾರಿಗೆ ಬಂದಿತು.

ಭೂನ್ಯಾಯ ಮಂಡಳಿಗಳ ರಚನೆಯಾಯಿತು. ಈ ಭೂನ್ಯಾಯ ಮಂಡಳಿಗಳಿಗೆ ಎಲ್ಲ ರೈತರಿಂದಲೂ ಅರ್ಜಿಗಳನ್ನು ಸಲ್ಲಿಸಿಸುವದು, ಭೂನ್ಯಾಯ. ಮಂಡಳಿಗಳಲ್ಲಿ ರೈತ ಸಂಘಟನೆಗಳ ಪ್ರತಿನಿಧಿಗಳನ್ನು ನೇಮಿಸಬೇಕು ಎಂಬ ಚಳುವಳಿಯನ್ನು ವಿಸ್ತೃತವಾಗಿ ನಡೆಸುವದು, ನ್ಯಾಯಮಂಡಳಿಗಳಲ್ಲಿ ಅನ್ಯಾಯವಾಗುವದನ್ನು, ಭ್ರಷ್ಟಾಚಾರ ನಡೆಯುವದನ್ನು ತಡೆಗಟ್ಟುವ ಚಳುವಳಿಯನ್ನು ಮಾಡುವ ದಿಕ್ಕಿನಲ್ಲಿ ಸಂಘಟನಾ ಕೆಲಸ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಈ ಘಟ್ಟದಲ್ಲೂ ನಮ್ಮ ರೈತ ಸಂಘವು ಬೆಳೆದು ಬರುತ್ತಿತ್ತು. ಶಕ್ತಿಯುತವಾಗುತ್ತಲಿತ್ತು. ಆದರೆ ಈ ಸಂದಿಗ್ಧ ಘಟ್ಟದಲ್ಲೇ ರೈತಸಂಘದ ಮುಂದಾಳತ್ವದಲ್ಲಿ ಒಂದು ಎಡ ತಿರುವು ಉಂಟಾಯಿತು. "ಈ ಕಾನೂನು ಕೇವಲ ಮೋಸದ್ದು, ಇದೊಂದು ದೊಂಬರಾಟ ನಾವು ರೈತರು ಈಗ ಈ ನ್ಯಾಯ ಮಂಡಳಿಗಳಲ್ಲಿ ನಮ್ಮ ನ್ಯಾಯಕ್ಕಾಗಿ ಹೋರಾಡುವದಲ್ಲ; ಬದಲು ರೈತ ಕ್ರಾಂತಿಯತ್ತಾ ಮುನ್ನಡೆಯಬೇಕು; ಈಗ ನಮ್ಮ ರೈತರ ಶಕ್ತಿ ಕಡಿಮೆ ಇದ್ದರೂ, ಆ ಮೂಲಕ ನಮ್ಮ ಶಕ್ತಿವೃದ್ಧಿಯಾಗುತ್ತಾ ಬಂದು ನಾವು ನಮ್ಮ ರಾಜ್ಯದಲ್ಲಿಯೂ, ದೇಶದಲ್ಲೂ ಕ್ರಾಂತಿ ಸ್ಥಾಪಿಸಬಹುದು; ಚೈನಾದಲ್ಲೂ ನಡೆದುದು ಇದೇ. ಇಲ್ಲಿಯೂ ನಡೆಯಬೇಕಾದುದು ಇದೆ" ಎಂಬ ಕ್ಷಿಪ್ರಕ್ರಾಂತಿ ತಪ್ಪು ಕಣ್ಣೋಟ ರೈತ ಮುಖಂಡರಲ್ಲಿ ಬಂದಿತು.

ಪರಿಣಾಮವಾಗಿ ರೈತಸಂಘಟನೆ, ರೈತ ಚಳುವಳಿ ಹಿಂದೆ ಬಿತ್ತು ಮಾತ್ರವಲ್ಲ ಶಿಥಿಲವಾಯಿತು. ಈ ತಪ್ಪು ಧೋರಣೆಯ ಫಲವಾಗಿ ಸಂಘಟನೆಯ ಕೆಲಸ ಕುಂಟಿತವಾಯಿತು. ಯಾವ ರೈತರಿಗಾಗಿ ಹಲವು ವರ್ಷಗಳಿಂದ ನಾವು ಹೋರಾಡುತ್ತಾ ಬಂದೆವೊ ಅವರು ಕಾಂಗ್ರೆಸ್, ಭೂನ್ಯಾಯ ಮಂಡಳಿಗಳ ದವಡೆಗೆ ಸಿಲುಕುವ ಪರಿಸ್ಥಿತಿ ಒದಗಿತು. ಹೋರಾಟದ ದಿಕ್ಕನ್ನು ಬಿಟ್ಟು ಟ್ರಿಬ್ಯೂನಲ್, ಕೋರ್ಟುಗಳಿಗೆ ಅಲೆಯುವ ಪರಿಸ್ಥಿತಿ ಒದಗಿತು. ಇದು ಆಳುವ ವರ್ಗಗಳಿಗೆ ಅನುಕೂಲವಾಯಿತು.

ಈ ಮುಂದಾಳುಗಳನ್ನು ಹೊರಹಾಕಿ, ಹೊಸ ಸಂಘಟನಾ ಸಮಿತಿ ರಚಿಸಿ, ಸದಸ್ಯತನವನ್ನು ನೋಂದಾಯಿಸಿ, ಅಖಿಲಭಾರತ ಕಿಸಾನಸಭಾಕ್ಕೆ ಪುನಃ ಸೇರ್ಪಡೆಯಾಗಿ ರಾಜ್ಯ ರೈತರ ಸಮ್ಮೇಳನವನ್ನು ನಡೆಸಿ ಪುನಃ 1948ರಲ್ಲಿ ರೈತಸಂಘವನ್ನು ಪುನರುಜ್ಜೀವನಗೊಳಿಸಲಾಯಿತು.

"ಭೂಮಿ" ಪ್ರಶ್ನೆಯ ಇತ್ಯರ್ಥದ ಮೂಲಭೂತ ಅವಶ್ಯಕತೆಯನ್ನು ಪ್ರಚಾರಮಾಡಲು ವೇಳೆಯಲ್ಲೇ, ರೈತರನ್ನು ಬಾಧಿಸುವ, ಅದರಲ್ಲೂ ದೇಶದಲ್ಲಿ ಬಂಡವಾಳಶಾಹಿ ಪದ್ಧತಿಯನ್ನು ಕಟ್ಟುವ ಭರದಲ್ಲಿ ಆಳುವ ವರ್ಗಗಳು ಮತ್ತು ಕಾಂಗ್ರೆಸ್ ಪಕ್ಷ ರೈತರನ್ನು ಹತ್ತು ಹಲವು ರೀತಿಯಲ್ಲಿ ಆರ್ಥಿಕಕ್ಕೆ ಸಿಲುಕಿಸಿ ಶೋಷಿಸಿ ಹಿಪ್ಪೆ ಮಾಡುತ್ತಿರುವುದರಿಂದ, ಈ ಎಲ್ಲಾ ವಿಷಯಗಳಲ್ಲಿ ರೈತರ ಪಕ್ಷವಹಿಸಿ ಅವರ ನೂರಾರು ಪ್ರಶ್ನೆಗಳಿಗಾಗಿ ಹೋರಾಡಲು ರೈತಸಂಘವು ಮುಂದೆ ಬಂದಿತು. ರಾಜ್ಯದ ವಿವಿರೆಡೆಗಳಲ್ಲಿ ಅಲ್ಲಲ್ಲಿ ವಿಶಿಷ್ಟವಾಗಿರುವ ಪ್ರಶ್ನೆಗಳ ಮೇಲೆ ಪ್ರಕ್ಷೋಭೆ, ಚಳುವಳಿಯನ್ನು ಸಂಘಟಿಸುವ ವೇಳೆಯಲ್ಲಿ ಸಮಗ್ರ ರೈತರನ್ನು ಬಾಧಿಸುವ ನೀರಿನಕರ, ಅಭಿವೃದ್ಧಿಕರ, ಬೆಳೆದ ಬೆಳೆಗಳಿಗೆ ನ್ಯಾಯಬೆಲೆ ಇತ್ಯಾದಿ ಪ್ರಶ್ನೆಗಳ ಮೇಲೆ ರಾಜ್ಯದಾದ್ಯಂತ ಚಳುವಳಿ ನಡೆಸುತ್ತಾ ರೈತಸಂಘ ಬೆಳೆಯುತ್ತಾ ಬಂದಿತು.

ಪ್ರಸಕ್ತ ಪರಿಸ್ಥಿತಿಯಲ್ಲಿ ರಾಜ್ಯದಲ್ಲಿ ರೈತಸಂಘಟನೆಯ ಬೆಳವಣಿಗೆಗೆ ಒಳ್ಳೆಯ ಭವಿಷ್ಯವಿದೆ. ಈಗ 30000 ಸದಸ್ಯರಿದ್ದಾರೆ. ಇನ್ನು ಒಂದೆರಡು ವರ್ಷಗಳಲ್ಲೇ 3 ಲಕ್ಷ ಸದಸ್ಯರನ್ನು ಮಾಡಿ ಬಲಿಷ್ಠವಾಗಿ ಬೆಳೆಯುವ ಸಾಧ್ಯತೆ ಇದೆ. ಈ ದಿಕ್ಕಿನಲ್ಲಿ ಮುನ್ನಡೆಯೋಣ!

●

ಎಸ್.ಎಫ್.ಐ. ರಾಜ್ಯಸಮಿತಿ ಸಭೆ
ಪ್ರಜಾಪ್ರಭುತ್ವ ಶಕ್ತಿಗಳ ಮೇಲೆ ನಡೆಯುತ್ತಿರುವ ದಾಳಿಯ ಖಂಡನೆ

ಅಕ್ಟೋಬರ್ 16ರಿಂದ 18ರ ವರೆಗೆ ರಾಯಚೂರು ಜಿಲ್ಲೆಯ ಗಂಗಾವತಿಯಲ್ಲಿ ನಡೆದ ಎಸ್. ಎಫ್. ಐ. ರಾಜ್ಯಸಮಿತಿ ಸಭೆಯು ದೇಶದಾದ್ಯಂತ ವಿದ್ಯಾರ್ಥಿಗಳ ಸಂಘಟನೆ ಮತ್ತು ಹೋರಾಟಗಳ ಮೇಲೆ ನಡೆಯುತ್ತಿರುವ ದಾಳಿ, ದಬ್ಬಾಳಿಕೆಯನ್ನು ಖಂಡಿಸಿತು. ಇದನ್ನು ಎದುರಿಸುವ ನಿಟ್ಟಿನಲ್ಲಿ ವಿದ್ಯಾರ್ಥಿ ಯುವಜನರು ಸಂಘಟನಾತ್ಮಕ ಉತ್ತರ ನೀಡಬೇಕೆಂದು ಕರೆ ನೀಡಿತು.

ಖಲೀಸ್ತಾನ ಚಳುವಳಿ; ಅಗತ್ಯ ಸೇವಾ ಸಂರಕ್ಷಣಾ ಕಾಯ್ದೆಯನ್ನು ತೀವ್ರವಾಗಿ ಖಂಡಿಸಿ ರಾಜ್ಯಸಮಿತಿಯು ನಿರ್ಣಯ ಅಂಗೀಕರಿಸಿದೆ. ಗೋಕಾಕ್ ಸಮಿತಿಯ ವರದಿಯನ್ನು ಕೂಡಲೇ ಅಂಗೀಕರಿಸಬೇಕೆಂದು ರಾಜ್ಯ ಸರಕಾರಕ್ಕೆ ಒತ್ತಾಯಿಸಿದೆ.

15-9-81ರಂದು "ನಡೆದ ಪಾರ್ಲಿಮೆಂಟ್ ಚಲೋ" ಕಾರ್ಯಕ್ರಮವನ್ನು ಚಾರಿತ್ರಿಕ ಹೋರಾಟವನ್ನಾಗಿ ಮಾಡುವಲ್ಲಿ ಯಶಸ್ವಿಯಾದ ಎಸ್. ಎಫ್. ಐ. ಮತ್ತು ಡಿ. ವೈ. ಎಫ್. ಐ. ಕೇಂದ್ರ ಸಮಿತಿಗಳನ್ನು ಮತ್ತು ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾಗಿರುವ ರಾಜ್ಯ ಸಮಿತಿ ಅಂಗೀಕರಿಸಿದೆ.

(7ನೇ ಪುಟ ನೋಡಿ)

ಮುದ್ದು ಮಕ್ಕಳ ಹೆಣಗಳ ಮೇಲೆ ಬೆಳ್ಳಿಹಬ್ಬ

ನವೆಂಬರ್ ಒಂದು ಕರ್ನಾಟಕ ರಾಜ್ಯ ಉದಯವಾಗಿ ಇಪ್ಪತ್ತೈದು ವರ್ಷವಾಯಿತು. ಈ ಸಲದ ರಾಜ್ಯೋತ್ಸವವನ್ನು ಅತೀ ವಿಜೃಂಭಣೆಯಿಂದ ಬೆಳ್ಳಿ ಹಬ್ಬವನ್ನಾಗಿ ಆಚರಿಸಲು ಗುಂಡೂರಾವ್ ಸರಕಾರದ ನಿರ್ಧಾರ. ಅದಕ್ಕಾಗಿ ಎಲ್ಲ ತಯಾರಿ. ಆಳುವವರಿಗೆ ಮಹದಾನಂದ ವಿಜೃಂಭಣೆ. ಆದರೆ ಜನರಿಗೆ ಮಾತ್ರ ಅಳು, ಕಣ್ಣೀರ ಹೊಳೆ.

ಕರ್ನಾಟಕ ರಾಜ್ಯ ಉದಯವಾಗಿ 25 ವರ್ಷವಾಯಿತು. ನಿಜ. ರಾಜ್ಯೋತ್ಸವವನ್ನು ಬೆಳ್ಳಿ ಹಬ್ಬವನ್ನಾಗಿ ವಿಜೃಂಭಣೆಯಿಂದ ಆಚರಿಸುವ ವಿಷಯ ಕರ್ನಾಟಕ ಏಕೀಕರಣಕ್ಕಾಗಿ ದುಡಿದು ಮಡಿದವರಿಗೆಲ್ಲ ಅತ್ಯಂತ ಹೆಮ್ಮೆಯ ಸಂಗತಿ. ಹರಿದು ಹಂಚಿಹೋದ ಕನ್ನಡಿಗರು-ಕನ್ನಡನಾಡು ಒಂದಾಗಿ, ಕನ್ನಡ ಭಾಷೆ, ಸಂಸ್ಕೃತಿ ಅರಳಿ, ಕನ್ನಡನಾಡಿನಲ್ಲಿ ಹುದುಗಿಕೊಂಡಿರುವ ನೈಸರ್ಗಿಕ ಸಂಪತ್ತನ್ನೆಲ್ಲ ಹೊರತೆಗೆದು, ಕೈಗಾರಿಕೋದ್ಯಮಗಳನ್ನು ಸ್ಥಾಪಿಸಿ, ಬೆಳೆಸಿ, ಸಾಕ್ಷರತೆ, ನಿರುದ್ಯೋಗ ಸಮಸ್ಯೆಯ ಪರಿಹಾರಕ್ಕೆ ದಾರಿಮಾಡಿಕೊಟ್ಟು, ನಾಡಿನ ಉತ್ತಮ ನೆಲ, ಜಲ, ಬುದ್ಧಿ ಮತ್ತೆಯನ್ನೆಲ್ಲ ಉಪಯೋಗಿಸಿ ಸುಖ-ಸಮೃದ್ಧ ಕನ್ನಡ ರಾಜ್ಯ ಕಟ್ಟಬೇಕೆಂಬ ಮಹದಾಸೆ ಹೊತ್ತು ದುಡಿದ ರೈತ-ಕಾರ್ಮಿಕರ, ವಿದ್ಯಾರ್ಥಿ, ಯುವಜನತೆಯ ಕನಸನ್ನು 25 ವರ್ಷಗಳಲ್ಲಿ ನನಸಾಗಿ ಮಾಡಿದ್ದಾಗಿದ್ದರೆ ಈಗ ಆಚರಿಸಲಾಗುತ್ತಿರುವ ಬೆಳ್ಳಿಹಬ್ಬಕ್ಕೇನಾದರೂ ಅರ್ಥವಿತ್ತು.

ಆದರೆ ಬೆಳ್ಳಿಹಬ್ಬವನ್ನಾಚರಿಸುತ್ತಿರುವಾಗ ನಾವು ಸರ್ವತೋಮುಖ ಅಭಿವೃದ್ಧಿಯನ್ನಾಗಲೀ, ಜನತೆಯಲ್ಲಿ ನೆಮ್ಮದಿಯನ್ನಾಗಲೀ ಕಾಣುತ್ತಿಲ್ಲ. ಅಧಿಕಾರಿ, ಮಂತ್ರಿಗಳೊಳಗೆ ಲಂಚಗುಳಿತನ, ಭ್ರಷ್ಟಾಚಾರದ ಪೈಪೋಟಿ, ಒಂದರ ಮೇಲೊಂದರಂತೆ ದುರಂತ; ಫೆಬ್ರವರಿ ತಿಂಗಳ ಸರ್ಕಸ್ ದುರಂತದಲ್ಲಿ ಸುಟ್ಟು ಬೂದಿಯಾದ 200ಕ್ಕೂ ಮೇಲ್ಪಟ್ಟ ಮುದ್ದು ಮಕ್ಕಳ ದಾರುಣ ದೃಶ್ಯ, ಜೂನ್ ತಿಂಗಳಲ್ಲಿ ಕಳ್ಳಭಟ್ಟಿ ದುರಂತದಲ್ಲಿ ಅಸುನೀಗಿದ 300ಕ್ಕೂ ಮೇಲ್ಪಟ್ಟ ಬಡಕಾರ್ಮಿಕರ ಸ್ಮಶಾನ ಯಾತ್ರೆ, ಮೊನ್ನೆತಾನೇ ಅಕ್ಟೋಬರ್ 18ರಂದು ಕಾಂಗ್ರೆಸ್ ಆಳ್ವಿಕೆಯಲ್ಲಿ ತಾವು ಅನುಭವಿಸುತ್ತಿರುವ ದುಃಖ ದುಮ್ಮಾನಗಳನ್ನೆಲ್ಲ ಸಂಪೂರ್ಣ ಮರೆತು, ನಿದ್ರಾದೇವಿಯ ತೋಳ ತೆಕ್ಕೆಯಲ್ಲಿ ನಿಶ್ಚಿಂತತೆಯಿಂದ ಮೈಮರೆತು ಮಲಗಿಕೊಂಡಿದ್ದ ರೈತರ ಕುಟುಂಬಗಳೆಲ್ಲ ಕೊಳ್ಳೆಗಾಲ ತಾಲ್ಲೂಕ ಗೋಪಿನಾಥಪುರದ ಒಡೆದ ಕೆರೆಯ ನೀರಿನ ಸೆಳವಿಗೆ ತುತ್ತಾಗಿ ನತದೃಷ್ಟ ಸೊತ್ತುಗಳನ್ನೆಲ್ಲ ನಷ್ಟಪಡಿಸಿಕೊಂಡ ನೀರವ ವಿಜೃಂಭಣೆಯ ಬೆಳ್ಳಿಹಬ್ಬ ಆಚರಿಸಲು ಸಾಧ್ಯವೇ? ಈ ಎಲ್ಲಾ ದುರಂತಗಳಿಗೆ ತುತ್ತಾಗಿ ತಮ್ಮ ಸರ್ವಸ್ವವನ್ನು ಕಳೆದುಕೊಂಡ ಬಡ ಕುಟುಂಬಗಳ ಕಣ್ಣೀರಿನ ಹೊಳೆಯು ಒಂದು ಹನಿ ಕೂಡ ಆರದಿರುವಾಗ, ಮುದ್ದು ಮಕ್ಕಳನ್ನು ಕಳೆದುಕೊಂಡ ತಾಯಂದಿರ ಕರುಳಿನ ದಾರುಣ ಕತೆಯನ್ನು ಕೊನೆಗಾಣದಾಗಿರುವಾಗ ಎಲ್ಲಿಯ ವಿಜೃಂಭಣೆಯ ಬೆಳ್ಳಿಹಬ್ಬ! ಬೆಂಗಳೂರಿನ ಲಕ್ಷಾವಧಿ ಕೇಂದ್ರ ಕಾರ್ಮಿಕರೆಲ್ಲ, ಕೇಂದ್ರ ಸರಕಾರವೇ ಒಪ್ಪಿಕೊಂಡ ಒಪ್ಪಂದದ ಅನುಷ್ಠಾನಕ್ಕಾಗಿ 80 ದಿವಸಕ್ಕೂ ಮೇಲ್ಪಟ್ಟ ಮುಷ್ಕರ ಹೂಡಿ, ಕಾಂಗ್ರೆಸ್ ಪೋಲೀಸ ಗೂಂಡಾಗಿರಿಗೆ ತುತ್ತಾಗಿ, ಅಪಾರ ಹಾನಿಗೊಳಗಾಗಿ, ಹಲವಾರು ನೌಕರರು ತಮ್ಮ ನೌಕರಿಗೆ ಸಂಚಕಾರವನ್ನೆದುರಿಸುತ್ತಿರುವಾಗ, ಮೈಕೋ, ಐ.ಟಿ.ಐ. ಹಾಗೆಯೇ ಹಲವಾರು ಕಾರ್ಖಾನೆಗಳ ಕಾರ್ಮಿಕರು ಹೋರಾಟದ ಫಲವಾಗಿ ನೌಕರಿ ಕಳಕೊಂಡು ಉಪವಾಸವಿರುವಾಗ, ಭ್ರಷ್ಟ ಭೂನ್ಯಾಯ ಮಂಡಳಿಗಳಿಂದ ತಮ್ಮ ಭೂಮಿ ಕಳಕೊಂಡ ರೈತರು ಬೀದಿಪಾಲಾಗಿರುವಾಗ, ಕನಿಷ್ಠ ವೇತನ ಜಾರಿಗಾಗಿ ಲಕ್ಷಾವಧಿ ಬೀಡಿ, ಕೃಷಿಕಾರ್ಮಿಕರೆಲ್ಲ ಹೋರಾಡುತ್ತಿರುವಾಗ, ನ್ಯಾಯಬದ್ಧ ಪಗಾರ ಹೆಚ್ಚಳಕ್ಕಾಗಿ ದಾಂಡೇಲಿಯ ಪ್ಲೈವುಡ್ ಕಾರ್ಖಾನೆಯ ಕಾರ್ಮಿಕರು ಹೋರಾಡಿದಾಗ ಪೋಲೀಸರ ದೌರ್ಜನ್ಯಕ್ಕೊಳಗಾಗಿ ನೂರಾರು ಕಾರ್ಮಿಕರೂ, ಕಾರ್ಮಿಕ ಮುಖಂಡರೂ ಪೋಲೀಸ ಕಸ್ಟಡಿಯಲ್ಲಿ ರಾಕ್ಷಸೀ ದಬ್ಬಾಳಿಕೆಯನ್ನೆದುರಿಸುತ್ತಿರುವಾಗ, ಪ್ಲೈವುಡ್ ಕಾರ್ಖಾನೆಯ ಕಾರ್ಮಿಕ ಮಹಿಳೆ ಭಾಗ್ಯಮ್ಮ ಹಾಗೂ ಇತರ ಹೆಂಗಸರು ಮಕ್ಕಳ ಮೇಲೆ ಪೋಲೀಸರ ರಾಕ್ಷಸೀ ದೌರ್ಜನ್ಯ ನಡೆಯುತ್ತಿರುವಾಗ ಎಲ್ಲಿಯ ಬೆಳ್ಳಿಹಬ್ಬ!

ಕೋಟ್ಯಾವಧಿ ರೂಪಾಯಿ ಖರ್ಚು ಮಾಡಿದ ಭದ್ರಾ-ತುಂಗಭದ್ರಾ ಅಣೆಕಟ್ಟುಗಳಿಂದ ಲಕ್ಷಾವಧಿ ಎಕರೆ ಭೂಮಿಗೆ ವೇಳೆಗೆ ಸರಿಯಾಗಿ ನೀರು ಸಿಗದೆ ರಸಾಯನಿಕ ಗೊಬ್ಬರದ ಬೆಲೆಯೇರಿಕೆಯಿಂದ ಕಂಗಾಲಾಗಿ ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೆ ಕಂಗಾಲಾದ ರೈತಸಮೂಹ ವಿಜೃಂಭಣೆಯ ರಾಜ್ಯೋತ್ಸವದಲ್ಲಿ ಪಾಲ್ಗೊಳ್ಳುವುದೇ ?

ಸರಕಾರಿ ನೌಕರದಾರರ, ಶಿಕ್ಷಕರ ಬೇಡಿಕೆಗಳನ್ನೆಲ್ಲ ಬೆಳ್ಳಿಹಬ್ಬದ ದಿವಸ ಪೂರ್ತಿಗೊಳಿಸುವುದಾಗಿ ಆಶ್ವಾಸನೆ ಕೊಟ್ಟು ಗುಂಡೂರಾಯರ ಗೂಂಡಾಶಾಹಿ ಸರಕಾರ ಅಕ್ಟೋಬರ್ 18ರಂದು ನಡೆಸಿದ ಚರ್ಚೆಯಲ್ಲಿ ನಿರಾಸೆಯನ್ನುಂಟುಮಾಡಿದ್ದರಿಂದ ನೌಕರದಾರವರ್ಗ ಉತ್ಸಾಹದಿಂದ ಭಾಗವಹಿಸುವುದೇ? ಹದಿನೈದು ಸಾವಿರ ಪ್ರೊಬೆಶನರಿ ನೌಕರರನ್ನು ಕಾಯಂಗೊಳಿಸುವುದಾಗಿ ಆಶ್ವಾಸನೆಗಳ ಸುರಿಮಳೆಗೈದು, ಲಕ್ಷಾವಧಿ ರೂಪಾಯಿ ಖರ್ಚುಮಾಡಿ, ತುಲಾಭಾರ ಮಾಡಿಕೊಂಡು, ಅಕ್ಟೋಬರ್ 22ರಂದು ಗುಲ್ಬರ್ಗದಲ್ಲಿ ಸೇರಿದ ಮಂತ್ರಿಮಂಡಲದ ಸಭೆಯಲ್ಲಿ ಈ ಮೊದಲೇ ನೇಮಿಸಿದ ಏಕ ಸದಸ್ಯ ಆಯೋಗವನ್ನು ಕಡೆಗಣಿಸಿ, ಈ ಪ್ರಶ್ನೆ ಕುರಿತು ಅಂತಿಮ ನಿರ್ಣಯ ಕೈಗೊಳ್ಳಲು ಮಂತ್ರಿಮಂಡಲದ ಉಪಸಮಿತಿ ನೇಮಿಸಿ ತಾನಿತ್ತ ಆಶ್ವಾಸನೆಗೆ ನೀರೆರೆದಿರುವುದನ್ನು ಕಂಡ ಪ್ರೊಬೆಶನರಿ ಪದವೀಧರರು ಬೆಳ್ಳಿಹಬ್ಬದಂದು ಯಾವ ಉತ್ಸಾಹದಿಂದ ಪಾಲ್ಗೊಳ್ಳುವರು?

ಆಕ್ಟ್ರಾಯಿ ರದ್ದಾದ ಕಳೆದೆರಡು ವರ್ಷಗಳಿಂದ ನಾಲ್ಕೈದು ತಿಂಗಳ ಗೊಮ್ಮೆಯೂ ತಮಗೆ ಸಿಗಬೇಕಾದ ಪಗಾರವನ್ನು ಕಾಣದ, ನಗರ ಸಭೆ ನೌಕರದಾರರೂ, ಪೌರಕಾರ್ಮಿಕರೂ ಎಷ್ಟು ಉತ್ಸಾಹದಿಂದ ರಾಜ್ಯೋತ್ಸವದಲ್ಲಿ ಪಾಲ್ಗೊಳ್ಳುತ್ತಾರೆ ಕಾದುನೋಡೋಣ!

—ಎಸ್.ಕೆ. ಉಪಾಧ್ಯಾಯ

ನೀರಿದ್ದೂ ಸರಿಯಾಗಿ ನೀರು ಸಿಗದ, ನೀರಿಲ್ಲದೆಯೂ ನೀರು ದೊರಕದ ನಗರಗಳ ನಾಗರೀಕರು ಎಷ್ಟು ನಿರುತ್ಸಾಹದಿಂದ ಈ ಸಮಾರಂಭದಲ್ಲಿ ಪಾಲ್ಗೊಳ್ಳುವರು ನೋಡಿರೋ.

ಭ್ರಷ್ಟಾಚಾರ, ಬೆಲೆಯೇರಿಕೆಗಳೆಲ್ಲ ಅಂತರಾಷ್ಟ್ರೀಯ ಸಮಸ್ಯೆಗಳೆಂದು ಹೇಳಿ ಅವುಗಳ ಕುರಿತು ತಕರಾರು ಮಾಡುವವರಿಗೆಲ್ಲ ಇಂದಿರಾಗಾಂಧಿಯವರ ಹಾಕಿರುವ ಈ ಮಹಾತಾಯಿಯ ಕೃಪಾಕಟಾಕ್ಷದಲ್ಲಿ ಆಡಳಿತ ನಡೆಸುತ್ತಿರುವ ಗುಂಡೂರಾವ್ ಕಂಪನಿ ಸರ್ಕಸ್ಸಿನಲ್ಲಿ ಸುಟ್ಟ ಮಕ್ಕಳಾಗಲೀ, ಕಳ್ಳಭಟ್ಟಿ ಸೆರೆ (ಸಾರಾಯಿ) ಸೇವಿಸಿ ಅಸು ನೀಗಿದ ಕಾರ್ಮಿಕರಾಗಲೀ, ಗೋಪಿನಾಥಂ ಕೆರೆ ನೀರಿನಲ್ಲಿ ಮುಳುಗಿ ಸತ್ತ ರೈತರಾಗಲೀ ದುಃಖ ಪ್ರದರ್ಶಿಸುವ ಅಗತ್ಯವೇನಿದೆ? ಜಗತ್ತಿನಂತೆಯೇ ನಮ್ಮಲ್ಲಿಯೂ ದುರಂತಗಳು ನಡೆಯುತ್ತವೆ. ಅದು ಪ್ರಕೃತಿ ನಿಯಮ. ಇದರಲ್ಲಿ ನಮ್ಮ ತಪ್ಪೇನಿದೆ? ಕಾರಣ ಬೆಳ್ಳಿಹಬ್ಬ ಮುಂದೆ ಸಾಗಲೆನ್ನುತ್ತಾರೆ ಆಡಳಿತ ಪಕ್ಷದವರು.

ದುರಂತಗಳಿಗೆ ಹೆದರದ ಗುಂಡೆದೆಯ ಗುಂಡೂರಾಯರು ನೂತನ ಕೆ.ಪಿ.ಸಿ.ಸಿ. ಅಧ್ಯಕ್ಷ ರಾಠೋಡರು, ಡಿ.ಸಿ.ಸಿ.ಗಳನ್ನು ಪುನಃರಚಿಸುತ್ತೇವೆ. ಮಂತ್ರಿಗಳೂ, ಲೋಕಸಭೆ, ವಿಧಾನ ಸಭೆ ಸದಸ್ಯರೆಲ್ಲ ಡಿ.ಸಿ.ಸಿ. ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆಕೊಡಬೇಕೆಂದು ಗುಡುಗಿದರೂ ಎದೆಗುಂದದೆ, ನಿಮ್ಮದು ಪಕ್ಷ, ನಮ್ಮದು ರಾಜಕೀಯ, ಬೆಳ್ಳಿಹಬ್ಬ ಮುಂದೆ ಸಾಗಲೆಂದು ಪಕ್ಷದ ಸಮಸ್ಯೆ ಮತ್ತೆ ವಿಚಾರಿಸೋಣವೆಂಬ ದೃಢ ನಿರ್ಧಾರದಲ್ಲಿ ಇದ್ದಾರೆ ಗುಂಡೂರಾಯರು.

ನವೆಂಬರ್ ಒಂದರೊಳಗೆ ಭೂನ್ಯಾಯ ಮಂಡಳಿಗಳ ಮುಂದಿರುವ ಅರ್ಜಿಗಳನ್ನೆಲ್ಲ "ವಿಕಾಲಿ" ಮಾಡಬೇಕೆಂಬ ಆಜ್ಞೆಯನ್ನು ಡಿಸೆಂಬರ್ ಕೊನೆಯವರೆಗೆ ಮುಂದೂಡಲಾಗಿದೆ. ಸರಕಾರಿ ನೌಕರದಾರರ, ಸ್ನಾತಕೋತ್ತರ ಪದವೀಧರರ ಬೇಡಿಕೆಗಳೂ ಮುಂದೆ ಸಾಗಿದವು. ಹಾಗೆಯೇ ಸಾರ್ವಜನಿಕರಿಗೆ, ಸಂಸ್ಥೆಗಳಿಗಿತ್ತ ಆಶ್ವಾಸನೆಗಳೂ ಮುಂದಕ್ಕೆ. ಆದರೆ ಬೆಳ್ಳಿಹಬ್ಬ ಮಾತ್ರ ಇಂದೇ. ಇದಕ್ಕೇನೇ ಹೆಸರು ಗುಂಡೂರಾವ್ ಕಾರಭಾರ. ಅಂತೂ ಇಂದಿರಾ ಗಾಂಧಿಯ "ಭ್ರಷ್ಟಾಚಾರ" ವ್ಯಾಖ್ಯೆಗೆ ಪುಷ್ಟಿಕೊಟ್ಟಿರುವ ಮಂತ್ರಿ ರೇಣುಕಾ ರಾಜೇಂದ್ರನ್, ಹಾಗೂ ಸಿ. ಎಂ. ಇಬ್ರಾಹಿಂ ಅವರ ಪ್ರಕರಣಗಳ ಬಿಸಿ ಇನ್ನೂ ಆರದಿದ್ದಾಗ, ಇವರಿಬ್ಬರ ಲಂಚಗುಳಿತನಗಳನ್ನೆಲ್ಲ ಬಯಲಿಗೆಳೆದು ಕೋರ್ಟು ಕಟ್ಟೆ ಏರುವಂತೆ ಮಾಡಿದ ಉಚ್ಚ ಪೋಲೀಸ್ ಅಧಿಕಾರಿಗಳ ಮೇಲಿನ ಸೇಡು ಇನ್ನೂ ಜೀವಂತವಾಗಿಯೇ ಇರುವಾಗ ಬೆಳ್ಳಿಹಬ್ಬದ ವೈಭವಕ್ಕೆ ಅದೆಂಥ ಕಳೆ ಬಂದೀತು?

ನಾಲಿಗೆಗೆ ಎಲುಬಿಲ್ಲವಲ್ಲ. ಆದು ಬೇಕಾದಂತೆ ಹೊರಳುತ್ತದೆ. ಬಹುಸಂಖ್ಯಾತರಿಗೆ ಸಂಬಂಧ ಪಟ್ಟ ಹಲವಾರು ಆಶ್ವಾಸನೆಗಳನ್ನು ಬಂಡೆಯಂತೆ ಗುಂಡೂರಾಯರು ಪೂರೈಸಲು ಹಿಂಜರಿದರೂ ಕೂಡ, "ನಮ್ಮವರ" "ನಮ್ಮ ಪಕ್ಷದವರ" ಒಂದೆರಡು ಬೇಡಿಕೆಗಳನ್ನಾದರೂ ಬೆಳ್ಳಿಹಬ್ಬದ ಸುಮುಹೂರ್ತದಲ್ಲಿ ಪೂರೈಸಬೇಕಲ್ಲ? ಕಾರಣ ತಾನು ಕೈಗೊಂಡ ನಿರ್ಧಾರದಲ್ಲಿ ಬದಲಾವಣೆ. ವಿವಿಧ ಕಾರ್ಪೋರೇಷನ್, ಮಂಡಳಿ, ಸಮಿತಿಗಳಿಗೆ ಖಾಸಗಿಯವರನ್ನು ನೇಮಿಸದಿರುವ ನಿರ್ಧಾರ ಗುಂಡೂರಾಯರು ಕೈಗೊಂಡಿದ್ದರು. ದೇವರಾಜ ಅರಸರಿಂದ ನೇಮಿಸಲ್ಪಟ್ಟವರಿಗೆಲ್ಲ ಮನೆಗ ಪ್ರಜೆಯಾಗಿತ್ತು. ಈ ಸಂಸ್ಥೆಗಳ ಅವಶ್ಯಕತೆ ಕುರಿತು ಚೌಕಾಶಿ ಮಾಡಲು ಕಮಿಟಿಯೊಂದನ್ನು ರಚಿಸಲಾಗುವುದೆಂದೂ, ಇಂಥ ಕ್ರಮದಿಂದ ರಾಜ್ಯ ಬೊಕ್ಕಸಕ್ಕೆ 2 ಕೋಟಿರೂ. ಉಳಿತಾಯವಾಗುವುದೆಂದೂ ಸಾರಿದ್ದರು. ಆಗ ಅದನ್ನು ಎಲ್ಲರೂ ಸ್ವಾಗತಿಸಿದ್ದರು. ಒಂದೂವರೆ ವರ್ಷಗಳ ನಂತರ ಮತ್ತೆ ಗುಂಡೂರಾಯರು ನೇಮಕಗಳ ಸರಣಿ ಪ್ರಾರಂಭಿಸಿದ್ದಾರೆ. ಆದರೆ ಈಗ ಇಂಥ ನೇಮಕಗಳ ಅವಶ್ಯಕತೆಗಳೇನೆಂಬುದನ್ನು ಸಾರ್ವಜನಿಕರಿಗೆ ತಿಳಿಸದಿರುವುದು ಆಶ್ಚರ್ಯ. ಗೂಂಡಾಗಿರಿಗೆ ಪ್ರಸಿದ್ಧಿ ಪಡೆದ ಯುವ ಕಾಂಗ್ರೆಸ್ಸಿನ ಹರಿಪ್ರಸಾದರಂಥವರನ್ನೂ ಕೊಳಚೆ ಪ್ರದೇಶ ನಿರ್ಮೂಲನ ಮಂಡಳಿಯ ಚೆಯರ್‌ಮನ್ ಆಗಿ ನೇಮಿಸಿರುವುದನ್ನೂ ನೋಡುವಾಗ ಬೆಳ್ಳಿಹಬ್ಬದ ದಿವಸ ಚಪ್ಪಾಳೆ ತಟ್ಟುವವರು ಕೆಲವರಾದರೂ ಇರಲೆಂದೇ ಈ ನಿರ್ಧಾರ ಇರಬೇಕಲ್ಲ.

ಅಂತೂ ಹೆಣಗಳಮೇಲಿನ ಬೆಳ್ಳಿಹಬ್ಬದ ದಿವಸ ಚಪ್ಪಾಳೆ ತಟ್ಟುವುದಕ್ಕೆ ಹೆಣಹಾಕಿದವರೂ ಎದ್ದು ಬರುತ್ತಾರಲ್ಲ. ಇದೇ ಇಂದಿರಾ-ಗುಂಡೂರಾವ್ ಆಳ್ವಿಕೆಯ ವೈಶಿಷ್ಟ್ಯ.

ಬೆಂಗಳೂರು ಎಸ್.ಎಫ್.ಐ. ಚಟುವಟಿಕೆಗಳು

ನಗರಸಮಿತಿ ಪುನರ್ರಚನೆ

ಎಸ್.ಎಫ್.ಐ. ಸಂಘಟನೆಯ ಪುನರ್ರಚಿತ ಬೆಂಗಳೂರು ನಗರಸಮಿತಿಯ ಅಧ್ಯಕ್ಷರಾಗಿ ಕಾಂ. ಉದಯ್ ಕುಮಾರ್, ಉಪಾಧ್ಯಕ್ಷರಾಗಿ ಕಾಂ. ಶಿವಶಂಕರ್, ಕಾರ್ಯದರ್ಶಿಯಾಗಿ ಕಾಂ. ಜಿ. ಎಸ್. ಮೋಹನ್, ಸಹ ಕಾರ್ಯದರ್ಶಿಯಾಗಿ ಕಾಂ. ಎಲ್.ಸಿ. ನಾಗರಾಜ್ ಮತ್ತು ಖಜಾಂಚಿಯಾಗಿ ಕಾಂ. ಕೆ. ಸುಶೀಲ ಅವರುಗಳು ಆಯ್ಕೆಯಾಗಿದ್ದಾರೆ. ಸಮಿತಿಯಲ್ಲಿ ಹತ್ತು ಕಾಲೇಜುಗಳ ಪ್ರತಿನಿಧಿಗಳಿದ್ದಾರೆ.

ಅಧ್ಯಯನ ಕೂಟ

ಎಸ್.ಎಫ್.ಐ. ಸದಸ್ಯರುಗಳಿಗೆ ಅಧ್ಯಯನ ಕೂಟವೊಂದನ್ನು ಪ್ರಾರಂಭಿಸಲು ತೀರ್ಮಾನಿಸಿದ್ದು ಅಕ್ಟೋಬರ್ 11ರಿಂದ ಪ್ರತಿ ಭಾನುವಾರ ತರಗತಿಗಳು ಪ್ರಾರಂಭವಾಗಿವೆ.

ಗ್ರಂಥ ಭಂಡಾರ

ಬೆಂಗಳೂರು ನಗರಸಮಿತಿಯು ನೂತನ ಗ್ರಂಥ ಭಂಡಾರವನ್ನು ಪ್ರಾರಂಭಿಸಿದೆ. ವಿದ್ಯಾರ್ಥಿಗಳ ಸಾಂಸ್ಕೃತಿಕ ತಂಡವೊಂದನ್ನು ತರಬೇತುಗೊಳಿಸಲಾಗಿದ್ದು ಈಗಾಗಲೇ ಹಲವು ಬೀದಿ ನಾಟಕಗಳನ್ನು ಪ್ರದರ್ಶಿಸಿ ಗ್ರಂಥ ಭಂಡಾರಕ್ಕೆ ನಿಧಿ ಸಂಗ್ರಹಿಸಲಾಗುತ್ತಿದೆ.

ರೈತರ ವಿಜಯ

ದೊಡ್ಡಬಳ್ಳಾಪುರ ತಾಲ್ಲೂಕಿನ ನೇರಳಘಟ್ಟ ಗ್ರಾಮದ ರೈತರು ಅಮಾನಿ ಮಾದರಿಯ ಹಾಲಿನ ಸಹಕಾರಿ ಸಂಘಕ್ಕಾಗಿ ಒಂದು ವರ್ಷದಿಂದ ಬೆಂಗಳೂರು ಜಿಲ್ಲಾ ರೈತ ಸಂಘದ ನೇತೃತ್ವದಲ್ಲಿ ಹೋರಾಟ ನಡೆಸಿದ್ದರು. ಕೆ.ಡಿ.ಡಿ.ಸಿ. ಮತ್ತು ಸಹಕಾರ ಸಂಘಗಳ ರಿಜಿಸ್ಟ್ರಾರ್‌ರ ಕಛೇರಿಗಳ ಎದುರು ಪ್ರದರ್ಶನ ಮಾಡಿದ್ದರು.

ಇತ್ತೀಚೆಗೆ ಸಂಬಂಧಪಟ್ಟವರು ನೇರಳಘಟ್ಟ ಗ್ರಾಮಕ್ಕೆ ಬಂದು ಅರ್ಜಿಯನ್ನು ಪರಿಶೀಲಿಸಿ ಸಂಘ ಮಂಜೂರ್ ಮಾಡಲು ಆದೇಶ ನೀಡಿದ್ದಾರೆ.

ಏಕೈಕ ಕನ್ನಡ ನಾಡು ನುಡಿ ಗುಡಿಗಾಗಿ–

ಕನ್ನಡ ಜನತೆ ಕಾದಿದ ಸಮರ

[ಈ ಲೇಖನ ಅವಿಭಜಿತ ಕಮ್ಯೂನಿಸ್ಟ್ ಪಕ್ಷದ ಕರ್ನಾಟಕ ರಾಜ್ಯಘಟಕ ಮುಖಪತ್ರಿಕೆಯಾಗಿದ್ದ ಜನಶಕ್ತಿಯಲ್ಲಿ ನವೆಂಬರ್ ೧, ೧೯೫೬ರಂದು ಪ್ರಕಟವಾಗಿದ್ದು.

ಕನ್ನಡನಾಡು ಉದಯಿಸಿ ಬೆಳ್ಳಿಹಬ್ಬ ಆಚರಿಸುತ್ತಿರುವ ಈ ಸಂದರ್ಭದಲ್ಲಿ ಕರ್ನಾಟಕ ಏಕೀಕರಣ ಹೋರಾಟದ ಕುರಿತಾದ ಈ ಲೇಖನವನ್ನು ಪುನರ್ ಮುದ್ರಿಸುತ್ತಿದ್ದೇವೆ.]

[ನವೆಂಬರ್ 1, 1956 ಕನ್ನಡಿಗರ ವಿಜಯೋತ್ಸವ ದಿನ. ಎರಡು ಕೋಟಿ ಕನ್ನಡಿಗರು ಒಂದುಗೂಡುವ ದಿನ. ಹರಿದು ಹಂಚಲ್ಪಟ್ಟ ಕನ್ನಡ ನಾಡು ಐಕ್ಯವಾಗುವ ಶುಭದಿನ. ಒಂದೇ ಕರ್ನಾಟಕ ರಚನೆಯಾಗಬೇಕೆಂಬ ಹೆಬ್ಬಯಕೆ ಈಡೇರುವ ದಿನ. ನಮ್ಮ ಜನತೆ ನಾಡಿಗಾಗಿ, ಗುಡಿಗಾಗಿ, ನುಡಿಗಾಗಿ ನಡೆಸಿದ ಸಮರವನ್ನು ನೆನೆಯೋಣ! ಹೊಸ ನಾಡಿಗೆ ಸಂಭ್ರಮದ ಸ್ವಾಗತ ನೀಡೋಣ!]

ಈಗ ಭಾರತಾದ್ಯಂತ ಪ್ರಾಂತಗಳ ಪುನರ್ವಿಂಗಡಣೆಯಾಗಲಿದೆ. ಹೆಚ್ಚುಕಡಿಮೆ ಭಾಷಾವಾರು ತಳಹದಿಯ ಮೇಲೆಯೇ ಹೊಸ ಪ್ರಾಂತಗಳ ನಿರ್ಮಾಣವಾಗಲಿದೆ. ದಕ್ಷಿಣ ಭಾರತದಲ್ಲಿ ಇದು ಸ್ಪಷ್ಟವಾಗಿದೆ. ಈ ರೀತಿಯ ಪುನರ್ವಿಂಗಡಣೆಯನ್ನು ಕೇಂದ್ರ ಸರ್ಕಾರ ಕೊನೆತನಕ ಎದುರಿಸಲು ಪ್ರಯತ್ನಿಸಿತು. ಆದರೆ ಅದರ ಪ್ರಯತ್ನಗಳೆಲ್ಲಾ ವಿಫಲವಾದುವು. ಜನತೆ ಜಯಭೇರಿ ಹೊಡೆಯಿತು.

ಕನ್ನಡಿಗರ ಹಿಂದಿನ ದುಃಸ್ಥಿತಿ

ಈ ತನಕ ಅಸ್ತಿತ್ವದಲ್ಲಿದ್ದ ಪ್ರಾಂತಗಳು ಯಾವ ಆಧಾರದ ಮೇಲೂ ರಚಿಸಲ್ಪಟ್ಟಿದ್ದಲ್ಲ. ಪ್ರಾಂತಗಳ ವಿಸ್ತೀರ್ಣವಾಗಲಿ, ಭಾಷೆ ಅಥವಾ ಸಂಸ್ಕೃತಿಯಾಗಲಿ, ಆರ್ಥಿಕ ಭದ್ರತೆಯಾಗಲಿ, ಆಡಳಿತೆಯ ಅನುಕೂಲತೆಯಾಗಲಿ ಅಥವಾ ದೇಶದ ಐಕ್ಯತೆಯಾಗಲಿ, ಆಧಾರವಾಗಿದ್ದು ರಚನೆಯಾದದ್ದಲ್ಲವೆಂಬುದು ಸ್ಪಷ್ಟವಾಗಿದೆ. ಕೆಲವು ಬಹು ಭಾಷಾ ಪ್ರಾಂತಗಳಿದ್ದವು. ಕೆಲವು ದೊಡ್ಡದಾಗಿಯೂ ಇನ್ನು ಕೆಲವು ಅತಿ ಚಿಕ್ಕ ಪ್ರಾಂತಗಳಾಗಿಯೂ ಇದ್ದುವು. ಈ ಪ್ರಾಂತಗಳನ್ನು ಬ್ರಿಟಿಷ್ ಸಾಮ್ರಾಜ್ಯಶಾಹಿಯು ತನ್ನ ಅನುಕೂಲಕ್ಕೆ ತಕ್ಕಂತೆ ಕೃತ್ರಿಮವಾಗಿ ರಚಿಸಿತ್ತೆಂಬುದು ಚರಿತ್ರೆ ಎತ್ತಿ ತೋರಿಸುತ್ತದೆ.

ಕನ್ನಡ ಜನತೆ ಇಪ್ಪತ್ತೆಂಟು ಆಡಳಿತೆಗಳಲ್ಲಿ ಹರಿದು ಹಂಚಲ್ಪಟ್ಟಿತ್ತು. 1947ರ ನಂತರ ಉತ್ತರ ಕರ್ನಾಟಕದ ಸಂಸ್ಥಾನಗಳನ್ನು ವಿಲೀನಗೊಳಿಸಲಾಯ್ತು. ಅದರ ನಂತರ ನಮ್ಮ ನಾಡು ಐದು ಆಡಳಿತೆಗಳಲ್ಲಿ ಉಳಿಯಿತು.

ಏಕೀಕರಣ ಚಳುವಳಿಯ ಆರಂಭ

ಕನ್ನಡನಾಡು ಒಂದಾಗಬೇಕೆಂಬ ಹೋರಾಟ 1905ರಲ್ಲಿ ಆರಂಭವಾಯಿತು. 1905ರಲ್ಲಿ ಬಂಗಾಳದ ವಿಭಜನೆಯ ವಿರುದ್ಧ ನಡೆದ ಹೋರಾಟವೇ ಭಾಷಾವಾರು ಪ್ರಾಂತ ರಚನೆಯ ಬೇಡಿಕೆಗೆ ನಾಂದಿಯಾಯಿತು. ಬಂಗಾಳದ ಚಳುವಳಿಯ ಪರಿಣಾಮ ಕರ್ನಾಟಕದ ಜನತೆಯ ಮೇಲೂ ಆಯಿತು. ಏಕೀಕರಣ ಚಳುವಳಿಯ ಪಿತಾಮಹರಾದ ಆಲೂರು ವೆಂಕಟರಾಯರು ಈ ರೀತಿ ಹೇಳಿದ್ದಾರೆ: "1905 ರಿಂದ 1915ರ ತನಕ, ಕನ್ನಡಿಗರೆಲ್ಲರ ಐಕ್ಯತೆಯನ್ನು ಸಾಧಿಸುವುದರ ಸಲುವಾಗಿ ನಾವು ಹಲವಾರು ಸಂಘಸಂಸ್ಥೆಗಳನ್ನು ಕಟ್ಟುವುದಕ್ಕೆ ಹೆಚ್ಚಿನ ಲಕ್ಷ್ಯ ಕೊಡಬೇಕಾಯಿತು. 1917ರಲ್ಲಿ ಮಾಂಟೇಗು ಕ್ಲೆಂಫೋರ್ಡ್ ಸುಧಾರಣಾ ಸಮಿತಿ ಬಂತು. ಕರ್ನಾಟಕದ ಏಕೀಕರಣವಾಗಬೇಕೆಂದು ನಾವು ಮೊದಲನೇ ಸಲ ಈ ಕಮಿಟಿಯ ಮುಂದೆ ಮನವಿ ಮಾಡಿಕೊಂಡೆವು. ನಮ್ಮ ಜೀವನದ ಕನಸಾದ "ಐಕ್ಯ ಕರ್ನಾಟಕದ ಸಾಧನೆಯ ಚಳುವಳಿ ಅಂದಿನಿಂದ ಪ್ರಾರಂಭವಾಯಿತು." 1915ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆಯಾದಾಗಿನಿಂದ ಈ ಚಳುವಳಿ ಹೆಚ್ಚಾಗಿ ಬೆಳೆಯಿತು. ನಮ್ಮ ರಾಷ್ಟ್ರೀಯ ಹೋರಾಟದ ಅಂಗವಾಗಿಯೇ ಭಾಷಾವಾರು ಪ್ರಾಂತ ರಚನೆಯ ಹೋರಾಟವೂ ಬೆಳೆಯಿತು. 1920-21ರಲ್ಲಿ ಅಸಹಕಾರ ಚಳುವಳಿ ನಡೆದಾಗ ಇದು ಬಲಗೊಂಡಿತು. ಅದರ ಪರಿಣಾಮವಾಗಿ ಭಾಷಾವಾರು ಆಧಾರದ ಮೇಲೆ ಕಾಂಗ್ರೆಸ್ ಪ್ರಾಂತ ಸಮಿತಿಗಳನ್ನು ರಚಿಸಿತು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಂಸ್ಥೆಯೂ ಆಗ ಸ್ಥಾಪನೆಯಾಯಿತು. 1928ರಲ್ಲಿ ನೆಹರೂ ಸಮಿತಿಯು ಕರ್ನಾಟಕ ಪ್ರಾಂತವಾಗಬೇಕೆಂದು ಸ್ಪಷ್ಟವಾಗಿ ತಿಳಿಸಿತು. 1937ರಲ್ಲಿ ಬೊಂಬಾಯಿ ಮತ್ತು ಮದ್ರಾಸ್ ಅಸೆಂಬ್ಲಿಗಳಲ್ಲಿ ಈ ಪ್ರಾಂತಗಳ ವಿಭಜನೆಯಾಗಿ ಭಾಷಾವಾರು ಪ್ರಾಂತಗಳ ರಚನೆಯಾಗಬೇಕೆಂಬ ನಿರ್ಣಯಗಳಾದುವು.

ಕಾಂಗ್ರೆಸ್ ಕೊಟ್ಟ ಭರವಸೆಗಳು

1938ರಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದೊಡನೆಯೇ ಭಾಷಾವಾರು ಪ್ರಾಂತ ರಚನೆ ಮಾಡುತ್ತೇವೆಂದು ನಿರ್ಣಯ ಮಾಡಿತು. ಅದೇ ಸಂದರ್ಭದಲ್ಲಿ ಮಹಾತ್ಮಾ ಗಾಂಧಿಯವರು ಈ ರೀತಿ ಹೇಳಿರುವರು: "ಪ್ರತ್ಯೇಕ ಕರ್ನಾಟಕ ಪ್ರಾಂತ ರಚನೆಯನ್ನು ಎದುರಿಸಲು ಸಾಧ್ಯವಿಲ್ಲ. ಕರ್ನಾಟಕ ಪ್ರಾಂತ ನಾನು ತುಂಬಾ ಆಶಿಸುತ್ತೇನೆ". ರಚನೆಯನ್ನು 1946ರಲ್ಲಿ ಬೊಂಬಾಯಿಯಲ್ಲಿ ನಡೆದ ಕರ್ನಾಟಕ ಏಕೀಕರಣ ಸಮ್ಮೇಳನವನ್ನು ಉದ್ಘಾಟಿಸುತ್ತಾ ಸರ್ದಾರ್ ವಲ್ಲಭಭಾಯಿ ಪಟೇಲರವರು ಕನ್ನಡಿಗರಿಗೆ ಆಶ್ವಾಸನೆ ಕೊಟ್ಟರು. "ಹರಿದು ಹಂಚಲ್ಪಟ್ಟ ಕನ್ನಡ ಪ್ರದೇಶಗಳು ಒಂದಾಗಿ, ಒಂದೇ ಪ್ರಾಂತ್ಯಾಡಳಿತೆ, ವಿಶ್ವವಿದ್ಯಾನಿಲಯ ಮತ್ತು ಹೆಮ್ಮೆಯ ತಮ್ಮದೇ ಆದ ಜೀವನವನ್ನು ಗಳಿಸಲು ಕನ್ನಡಿಗರು ಬಹಳ ಕಾಲ ಕಾಯಬೇಕಾಗಿಲ್ಲ. ಬ್ರಿಟಿಷರು ಭಾಷವಾರು ಪ್ರದೇಶಗಳನ್ನು ತುಂಡು ತುಂಡಾಗಿಮಾಡಿ ತಂದಿರುವ ಅಡ್ಡಿ ಆತಂಕಗಳನ್ನು ತೊಡೆದು ಹಾಕುವುದು ಸ್ವತಂತ್ರ ಭಾರತದ ಪ್ರಪ್ರಥಮ ಕರ್ತವ್ಯಗಳಲ್ಲೊಂದಾಗಿದೆ".

೧೯೪೭ರನಂತರ ಕಾಂಗ್ರೆಸ್ಸಿನ ಅಂತರ್ಲಾಗ

1947ರಲ್ಲಿ ಕಾಂಗ್ರೆಸ್ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಮೇಲೆ ತಾನು ಹಿಂದೆ ಕೊಟ್ಟ ಆಶ್ವಾಸನೆಗಳನ್ನು ಮುರಿಯುತ್ತಾ ಬಂತು. ಕಾಂಗ್ರೆಸ್ ನಾಯಕರು ಭಾಷಾವಾರು ಪ್ರಾಂತ ರಚನೆಯನ್ನೇ ವಿರೋಧಿಸಲು ಆರಂಭ ಮಾಡಿದರು. 27-11-47ರಲ್ಲಿ ಪಂಡಿತ್ ನೆಹರೂರವರು ಭಾಷಾವಾರು ಪ್ರಾಂತ ರಚನೆಗೆ ಒಣ ಸಹಾನುಭೂತಿ ತೋರಿಸುತ್ತಾ ಕರ್ನಾಟಕ ಪ್ರಾಂತ ರಚನೆ ಬಗ್ಗೆ ಈ ರೀತಿ ಹೇಳಿದರು: "ಮಹಾರಾಷ್ಟ್ರ ಮತ್ತು ಕರ್ನಾಟಕ ಪ್ರಾಂತಗಳ ರಚನೆಯು ತುಂಬ ಕಷ್ಟಕರವಾಗಿದೆ. ಯಾಕೆಂದರೆ ಹೀಗಾಗುವ ಬದಲಾವಣೆಯಿಂದ ಸಂಬಂಧಪಟ್ಟ ಪ್ರಾಂತಗಳ ಆರ್ಥಿಕ ಪರಿಸ್ಥಿತಿ ಮತ್ತು ಆಡಳಿತೆಗಳಿಗೆ ತೀವ್ರ ಪರಿಣಾಮವಾಗುವುದು."

ರಾಜ್ಯಾಂಗ ಘಟನೆ ತಯಾರಾಗುತ್ತಿದ್ದಾಗ ಭಾಷಾವಾರು ಪ್ರಾಂತಗಳ ರಚನೆಗೆ ಎಲ್ಲ ಕಡೆಗಳಿಂದಲೂ ಒತ್ತಾಯ ಬಂದರೂ ಕಾಂಗ್ರೆಸ್ ನಾಯಕರು ಒಪ್ಪಲಿಲ್ಲ. 1948ರಲ್ಲಿ ಧಾರ್ ಸಮಿತಿಯ ನೇಮಕವಾಯಿತು. "ಮೈಸೂರು ಇತರ ಪ್ರದೇಶಗಳನ್ನು ಸೇರಿಸಿಕೊಳ್ಳಲು ತಯಾರಾಗಿದ್ದರೆ ಎಲ್ಲ ಪ್ರದೇಶಗಳನ್ನು ಒಟ್ಟು ಸೇರಿಸಿ ಪ್ರತ್ಯೇಕ ಪ್ರಾಂತ ರಚನೆ ಮಾಡಲು ಸಾಧ್ಯವಿತ್ತು. ಮೈಸೂರು ಸಂಸ್ಥಾನವು ಕರ್ನಾಟಕದಲ್ಲಿ ವಿಲೀನಗೊಳ್ಳಲು ತಯಾರಿಲ್ಲವೆಂದು ತೋರುವುದರಿಂದ ಕೇಂದ್ರದ ಭಾಗಗಳನ್ನು ಭಾರತೀಯ ಸಂಸ್ಥಾನದಲ್ಲಿ ಸೇರಿಸಲು ಕೇಂದ್ರ ಸರಕಾರ ತಯಾರಾಗಿದೆಯೇ ಎಂಬುದನ್ನು ನಾವು ಹೇಳಲು ಸಾಧ್ಯವಿಲ್ಲ" ವೆಂದು 10-12-48ರಲ್ಲಿ ಅದು ವರದಿ ಮಾಡಿತು. ಇದನ್ನು ಕನ್ನಡ ಜನತೆ ತೀವ್ರವಾಗಿ ಪ್ರತಿಭಟಿಸಿತು. ಕೂಡಲೇ ಕಾಂಗ್ರೆಸ್ಸು ಇನ್ನೊಂದು ಸಮಿತಿಯನ್ನು ರಚಿಸಿತು. ಅದೇ ಜೆ. ವಿ. ಪಿ. ಸಮಿತಿ. ಈ ಸಮಿತಿಯೂ ಕರ್ನಾಟಕದ ಬೇಡಿಕೆಯನ್ನು ನಿರಾಕರಿಸಿತು. ಭಾಷಾವಾರು ಪ್ರಾಂತವು ರಚನೆಯಾಗಬೇಕೆಂದು ಒತ್ತಾಯಪಡಿಸುವುದಾದರೆ ಸಂಬಂಧಪಟ್ಟ ಪಕ್ಷಗಳು ಒಮ್ಮತಾಭಿಪ್ರಾಯಕ್ಕೆ ಬಂದರೆ ಮಾನ್ಯ ಮಾಡಬಹುದೆಂದು ಅದು ಅಭಿಪ್ರಾಯಪಟ್ಟಿತು. ಇದರ ಉದ್ದಿಶ್ಯ ಮೈಸೂರು ಕಾಂಗ್ರೆಸ್ ನಾಯಕರನ್ನು ವಿರೋಧವಾಗಿ ಎತ್ತಿಕಟ್ಟುವುದಾಗಿತ್ತು.

ರಾಜಿನಾಮೆಯ ನಾಟಕ

ಕರ್ನಾಟಕ ಕಾಂಗ್ರೆಸ್ ಸಮಿತಿಯು ಈ ವರದಿಯನ್ನು ಖಂಡಿಸಿದರೂ ನೇರವಾದ ಕ್ರಮವನ್ನು ತೆಗೆದುಕೊಳ್ಳಲು ನಿರಾಕರಿಸಿತು. ಜನತೆಯ ಒತ್ತಾಯದಿಂದ 3-12-1949ರಂದು ಸಭೆಸೇರಿ ಕರ್ನಾಟಕದ ಪ್ರಾಂತ ಅಸೆಂಬ್ಲಿ ಮತ್ತು ಕೇಂದ್ರದ ಸದಸ್ಯರೆಲ್ಲರೂ ಕಾಂಗ್ರೆಸ್ ನಾಯಕರ ಅನುಮತಿ ಪಡೆದು ರಾಜಿನಾಮೆ ಕೊಡಬೇಕೆಂದು ಕರ್ನಾಟಕ ಕಾಂಗ್ರೆಸ್ ಸಮಿತಿ ತೀರ್ಮಾನ ಮಾಡಿತು, ಆದರೆ ಮೇಲಿನ ನಾಯಕರಿಗೆ ಹೆದರಿ ನಿರ್ಣಯವನ್ನು ಜಾರಿಗೆ ತರಲೇ ಇಲ್ಲ.

ಕೇಂದ್ರ ಸರಕಾರದ ಧೋರಣೆಯಿಂದಲೂ, ಕರ್ನಾಟಕ ಕಾಂಗ್ರೆಸ್‌ನವರ ವರ್ತನೆಯಿಂದಲೂ ಕರ್ನಾಟಕದ ಹಲವಾರು ಕಾರ್ಯಕರ್ತರು ಬೇಸತ್ತು ಕಾಂಗ್ರೆಸ್ಸಿಗೇ ರಾಜಿನಾಮೆ ಕೊಟ್ಟು ಹೊರಗೆ ಬಂದರು. ಮತ್ತು ಏಕೀಕರಣ ಪಕ್ಷವೆಂಬ ಹೊಸ ಪಕ್ಷವನ್ನು ಸ್ಥಾಪಿಸಿದರು.

ಚುನಾವಣೆಯ ನಂತರ ಜನತೆಯ ಹೋರಾಟ

1951-52ರ ಚುನಾವಣೆಯಲ್ಲಿ ಕಾಂಗ್ರೆಸ್ ಏಕೀಕರಣದ ಘೋಷಣೆಯನ್ನು ಕೊಟ್ಟು ಜನತೆಯ ಓಟನ್ನು ಗಳಿಸಿತು. ಕಾಂಗ್ರೆಸ್ ಬಹುಸಂಖ್ಯೆ ಆರಿಸಿ ಬಂದರೆ ಏಕೀಕರಣವು ಖಂಡಿತ ಆಗುವುದೆಂಬ ಭರವಸೆಯನ್ನು ನೀಡಿತು. ಆದರೆ ಜನವರಿ 1953ರಲ್ಲಿ ನಾನಲ್ ನಗರ ಅಧಿವೇಶನದಲ್ಲಿ ಕಾಂಗ್ರೆಸ್ ಭಾಷಾವಾರು ಪ್ರಾಂತ ರಚನೆಯನ್ನು ವಿರೋಧಿಸಿ ತೀರ್ಮಾನ ಮಾಡಿತು. ಇದರಿಂದ ಕರ್ನಾಟಕದಲ್ಲಿ ಪ್ರಕ್ಷುಬ್ಧ ವಾತಾವರಣವುಂಟಾಯಿತು. ಕನ್ನಡ ಜನತೆಗೆ ಗಾಯದ ಮೇಲೆ ಬರೆ ಎಳೆದಂತಾಯಿತು.

ಇದೇ ಸಮಯದಲ್ಲಿ ಆಂಧ್ರದಲ್ಲಿ ಶ್ರೀ ರಾಮುಲುರವರು ಆಂಧ್ರ ಪ್ರಾಂತ ರಚನೆಗಾಗಿ ಆಮರಣ ಉಪವಾಸ ಮಾಡಿ ಹುತಾತ್ಮರಾದರು. ಆಗ ಆಂಧ್ರದಲ್ಲೆಲ್ಲಾ ಪ್ರಾಂತ ರಚನೆಯನ್ನು ಕೇಂದ್ರ ಸರಕಾರ ಮಾನ್ಯ ಮಾಡಬೇಕಾಯಿತು.

ಇದರಿಂದ ಕರ್ನಾಟಕದಲ್ಲಿ ಹೊಸ ಸ್ಫೂರ್ತಿ ಬಂತು. ಶ್ರೀ ಶಂಕರಗೌಡರು ಅದರ ಗುಂಬಿನಲ್ಲಿ ಏಕೀಕರಣಕ್ಕಾಗಿ ಉಪವಾಸ ಆರಂಭಿಸಿದರು. ಕರ್ನಾಟಕ ಕಾಂಗ್ರೆಸ್ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಅವರ ಬೇಡಿಕೆ ಇತ್ತು. 23 ದಿವಸದ ನಂತರ ಕೆ. ಪಿ. ಸಿ. ಸಿ. ಸಭೆ ಹುಬ್ಬಳ್ಳಿಯಲ್ಲಿ ಸೇರಿತು. ಆದರೆ ಈ ಸಲ ಜನ ಸುಮ್ಮನಿರಲಿಲ್ಲ. ಅರ್ಧ ಲಕ್ಷ ಜನ 19-4-53ರಂದು ಹುಬ್ಬಳ್ಳಿಯಲ್ಲಿ ಕೆ. ಪಿ. ಸಿ. ಸಿ. ಸಭೆ ನಡೆಯುವಲ್ಲಿ ಪ್ರದರ್ಶನಮಾಡಿತು. ಶ್ರೀ ನಿಜಲಿಂಗಪ್ಪನವರೇ ಕೆ. ಪಿ. ಸಿ. ಸಿ. ಯ ಅಧ್ಯಕ್ಷರಾಗಿದ್ದರು. ಜನತೆಗೆ ಕಾಂಗ್ರೆಸ್ ನಾಯಕರ ಟೊಳ್ಳು ಭರವಸೆ ಬೇಕಾಗಿರಲಿಲ್ಲ. ಕೃತಿ ಬೇಕಾಗಿತ್ತು. ಕಾಂಗ್ರೆಸ್ಸಿಗೆ ಜನತೆಯ ಮೇಲೆ ನಂಬಿಕೆ ಹೋಗಿತ್ತು. ತಮ್ಮನ್ನು ಜನತೆಯಿಂದ ರಕ್ಷಿಸಿಕೊಳ್ಳಲು ಪೋಲೀಸ್ ಸಹಾಯ ಪಡೆದರು. ಕೂಡಲೇ ಜನತೆಯ ಮೇಲೆ ಲಾಠಿ ಪ್ರಹಾರ, ಗೋಳೀಬಾರ್ ನಡೆಯಿತು. ಕಾಂಗ್ರೆಸ್ ಮುಖಂಡರು ಜನತೆಯ ಒತ್ತಾಯಕ್ಕೆ ದಿಕ್ಕು ತೋಚದೆ ಕಾಂಗ್ರೆಸ್ಸಿಗೆ ರಾಜಿನಾಮೆ ಬರಕೊಟ್ಟರು. 1954ರ ಅಂತ್ಯದೊಳಗೆ ಕರ್ನಾಟಕ ಪ್ರಾಂತ ರಚನೆಯಾಗುವುದೆಂದು ಸರಕಾರ ಘೋಷಿಸದಿದ್ದರೆ ಕಾಂಗ್ರೆಸ್ಸಿಗೆ ಎಲ್ಲರೂ ರಾಜಿನಾಮೆ ಕೊಡಬೇಕೆಂಬ ನಿರ್ಣಯವೂ ಆಯಿತು. ಗೌಡರು ಉಪವಾಸ ನಿರ್ಧರಿಸಿದರು. ಮರುಕ್ಷಣವೇ ನಿರ್ಣಯವೂ ಕಸದ ಬುಟ್ಟಿಗೆ ಬಿತ್ತು. ಇದು ಕಾಂಗ್ರೆಸ್ಸಿನ ದ್ರೋಹದ ಪರಮಾವಧಿ. ಹುಬ್ಬಳ್ಳಿಯ ಈ ಘಟನೆ ಅತ್ಯಂತ ಚಾರಿತ್ರಿಕವಾಗಿದ್ದು ಇಡೀ ಕರ್ನಾಟಕವನ್ನೇ ತಲ್ಲಣಿಸಿತು. ಕಾಂಗ್ರೆಸ್ಸಿನ ಬಣ್ಣ ಬಯಲಾಯಿತು. ಇದರ ಮೊದಲು ಬಳ್ಳಾರಿ ತಾಲ್ಲೂಕನ್ನು ಆಂಧ್ರಕ್ಕೆ ಸೇರಿಸಬೇಕೆಂದು ಕೇಂದ್ರ ಸರಕಾರ ತೀರ್ಮಾನಿಸಿದಾಗಲೂ ಉತ್ತರ ಕರ್ನಾಟಕದಲ್ಲಿ ತೀವ್ರ ಪ್ರತಿಭಟನೆ ನಡೆಯಿತು. ಈ ಸಂದರ್ಭದಲ್ಲೂ ಏಪ್ರಿಲ್ 19ರ ಹುಬ್ಬಳ್ಳಿ ಪ್ರದರ್ಶನದಲ್ಲೂ ಹಲವಾರು ಕಮ್ಯೂನಿಸ್ಟ್ ನಾಯಕರನ್ನು ಸೆರೆಹಿಡಿದು ಅವರ ಮೇಲೆ ಖಟ್ಲೆಗಳನ್ನು ಹೂಡಲಾಯಿತು.

ಹೋರಾಟದ ಹೊಸ ಸ್ವರೂಪ

ಇಷ್ಟು ವರ್ಷ ಚಳುವಳಿ ಸ್ವರೂಪ ಬರೇ ನಿರ್ಣಯ ಮಾಡುವುದು, ಸಭೆ ಸಮ್ಮೇಳನಗಳನ್ನು ನಡೆಸುವುದು, ಕಾಂಗ್ರೆಸ್‌ನವರು ರಾಜಿನಾಮೆಯ ನಾಟಕ ಹೂಡುವುದು-ಇದೇ ಆಗಿತ್ತು. ಆದರೆ ಈಗ ಅದು ಪ್ರತ್ಯಕ್ಷ ಹೋರಾಟಕ್ಕಿಳಿಯಿತು. ಆಂಧ್ರರ ಅನುಭವದ ಸ್ಫೂರ್ತಿ ಒಂದು ಕಡೆ, ಕರ್ನಾಟಕದ ಕಾಂಗ್ರೆಸ್ ನಾಯಕರ ದ್ರೋಹ ಇನ್ನೊಂದು ಕಡೆ- ಇದರಿಂದ ಕರ್ನಾಟಕದಲ್ಲೆಲ್ಲಾ ಹೋರಾಟಕ್ಕೆ ಒತ್ತಾಯ ಬಂತು. ಶ್ರೀ ಮಹದೇವಪ್ಪ ಮುರಗೋಡ, ಪಾಟೀಲ ಮುಂತಾದವರು ಉಪವಾಸ ಹೂಡಿ ಹೋರಾಟದ ವಾತಾವರಣವನ್ನು ಕೆರಳಿಸಿದರು ಚಳುವಳಿ ಹೊಸ ಘಟ್ಟಕ್ಕೆ ತಲುಪಿತು ಇಷ್ಟು ದಿವಸ ಕಾಂಗ್ರೆಸ್ಸನ್ನೇ ಅವಲಂಬಿಸಿದ್ದ ಚಳುವಳಿಗೆ ಇತರರು ನಾಯಕತ್ವ ಕೊಡಬೇಕಾಯಿತು.

ಹೋರಾಟಕ್ಕೆ ಒಂದು ಸಂಘಟಿತ ರೂಪಕೊಡಲು ದಾವಣಗೆರೆಯಲ್ಲಿ ಸರ್ವಪಕ್ಷ ಸಮ್ಮೇಳನ ನಡೆಯಿತು. ಅದರಲ್ಲಿ ಕಾಂಗ್ರೆಸ್ ಭಾಗವಹಿಸಲಿಲ್ಲ. ಕಮ್ಯೂನಿಸ್ಟ್ ಪಾರ್ಟಿ, ಪಿ. ಎಸ್. ಪಿ. ಮತ್ತು ಅನೇಕ ಸ್ವತಂತ್ರರು ಇದರಲ್ಲಿ ಭಾಗವಹಿಸಿ ಅ. ಕ. ರಾ. ನಿ. ಪರಿಷತ್ತನ್ನು ಸ್ಥಾಪಿಸಿದರು. 9-8-53 ರಂದು ಹೋರಾಟ ಆರಂಭಿಸಬೇಕೆಂದೂ ತೀರ್ಮಾನವಾಯಿತು.

ಸರಕಾರ ಕೂಡಲೇ ದಬ್ಬಾಳಿಕೆಯನ್ನಾರಂಭಿಸಿತು. ಆಗಸ್ಟ್ 8 ರಂದೇ ಅನೇಕ ನಾಯಕರನ್ನು ಸೆರೆಹಿಡಿದು ಸ್ಥಾನಬದ್ಧತೆಯಲ್ಲಿಡಲಾಯಿತು. ಅನೇಕ ಕಡೆಗಳಲ್ಲಿ 144ನೇ ಸೆಕ್ಷನ್ ಜಾರಿಯಾಯಿತು. ನೂರಾರು ಜನರ ಮೇಲೆ ಖಟ್ಲೆ ಹೂಡಲಾಯಿತು. ಉತ್ತರ ಕರ್ನಾಟಕದಲ್ಲೆಲ್ಲಾ ಪೋಲೀಸ್ ಮತ್ತು ಮಿಲಿಟರಿ ಕಾವಲಿಡಲಾಯಿತು. ಕಮ್ಯೂನಿಸ್ಟ್ ಸದಸ್ಯರ ಮತ್ತವರ ಹಿತೈಷಿಗಳಮೇಲೆಯೇ ಸರ್ಕಾರದ ವಕ್ರದೃಷ್ಟಿ ಹೆಚ್ಚಾಗಿ ಬಿತ್ತು.

ಅದೇ ಕಾಲದಲ್ಲಿ ಹುಬ್ಬಳ್ಳಿಯಲ್ಲಿ ಅಸೆಂಬ್ಲಿ ಉಪಚುನಾವಣೆ ನಡೆಯಿತು. ಅದರಲ್ಲಿ ಕಾಂಗ್ರೆಸ್ ಉಮೇದ್ವಾರರಿಗೆ ಸೋಲಾಗಿ ಏಕೀಕರಣವಾದಿ ಉಮೇದುವಾರರು ಆರಿಸಿ ಬಂದರು. ಅದರ ಮೊದಲು ಧಾರವಾಡದಲ್ಲಿ ನಡೆದಉಪಚುನಾವಣೆಯಲ್ಲೂ ಕಾಂಗ್ರೆಸ್ಸಿಗೆ ಸೋಲಾಗಿತ್ತು. ಚಳುವಳಿಯು ಬೆಳೆಯಿತು. ನಂತರ ರೋಣದಲ್ಲಿ ನಡೆದ ಚುನಾವಣೆಯಲ್ಲೂ ಕಾಂಗ್ರೆಸ್ಸಿಗೆ ಸೋಲಾಯಿತು.

ಇದರಿಂದ ಕರ್ನಾಟಕ ಕಾಂಗ್ರೆಸ್ ನಾಯಕರು ಕಂಗಾಲಾದರು. ಕರ್ನಾಟಕ ಪ್ರಾಂತವನ್ನು ಮಾನ್ಯ ಮಾಡದಿದ್ದರೆ ಕಾಂಗ್ರೆಸ್ ಅಳಿದುಹೋಗುತ್ತದೆಂದು ನೆಹರೂರವರನ್ನು ಅಂಗಲಾಚಿ ಬೇಡಿಕೊಂಡರು.

ಎಸ್.ಆರ್.ಸಿ. ವರದಿಯ ಅನ್ಯಾಯ

ಈ ಹೋರಾಟದ ಪರಿಣಾಮವಾಗಿ ಕೇಂದ್ರ ಸರಕಾರ ಪ್ರಾಂತ ಪುನರ್ವಿಂಗಡಣಾ ಸಮಿತಿಯನ್ನು ನೇಮಿಸಿತು, ನವೆಂಬರ್ '55ರಲ್ಲಿ ಅದರ ವರದಿ ಪ್ರಕಟಣೆಯಾಯಿತು. ಅದರಲ್ಲಿ ಕನ್ನಡ ಜನತೆಯ ನ್ಯಾಯವಾದ ಬೇಡಿಕೆಗೆ ಪುರಸ್ಕಾರ ದೊರೆತು ಕರ್ನಾಟಕ ಪ್ರಾಂತ ರಚನೆಯಾಗಬೇಕೆಂದು ಅಭಿಪ್ರಾಯವಿತ್ತು. ಇದು ಕನ್ನಡಿಗರಿಗೆ ದೊರೆತ ಜಯ. ಆದರೆ ಅದರಲ್ಲಿ ಕೆಲವು ಅಂಶಗಳು ಅನ್ಯಾಯವಾಗಿದ್ದವು. ಬಳ್ಳಾರಿ ಜಿಲ್ಲೆಯ ಕೆಲವು ಪ್ರದೇಶಗಳನ್ನು ಆಂಧ್ರಕ್ಕೆ ಸೇರಿಸಬೇಕೆಂದೂ ಕಾಸರಗೋಡು ತಾಲ್ಲೂಕನ್ನು ಕೇರಳಕ್ಕೆ ಸೇರಿಸಬೇಕೆಂದೂ ಅದರಲ್ಲಿ ಶಿಫಾರಸು ಮಾಡಲಾಗಿತ್ತು. ಅದನ್ನು ಪ್ರತಿಭಟಿಸಿ ಜನತೆ, ಹೋರಾಡಬೇಕಾಯಿತು. ಸಾವಿರಾರು ಜನ ಬಳ್ಳಾರಿ ಮತ್ತು ಕಾಸರಗೋಡಿನಲ್ಲಿ ಜೈಲಿಗೆ ಹೋದರು. ಹರತಾಳಗಳಾದುವು. ಬಳ್ಳಾರಿಯಲ್ಲಿ ಜಯ ದೊರೆಯಿತು. ಕಾಸರಗೋಡು ಮಾತ್ರ ಕೇರಳಕ್ಕೆ ಸೇರಿಸಲ್ಪಟ್ಟಿದೆ.

ಎರಡು ಕರ್ನಾಟಕದ ಅಪಸ್ವರ

ಏಕೀಕರಣ ಚಳುವಳಿಯು ಕಾಂಗ್ರೆಸ್ ಸರಕಾರದ ವಿರುದ್ಧ ಹೋರಾಡಿದ್ದಲ್ಲದೆ ಕೊಡಗು ಮತ್ತು ಮೈಸೂರು ಪ್ರದೇಶಗಳಲ್ಲಿ ತಲೆಯೆತ್ತಿದ ಪ್ರತ್ಯೇಕತೆಯ ಅಪಸ್ವರವನ್ನೂ ಎದುರಿಸಬೇಕಾಯಿತು. ಹಿಂದೆ ಕರ್ನಾಟಕಕ್ಕೆ ಬೆಂಬಲಕೊಟ್ಟಿದ್ದ ಈ ನಾಯಕರು ಅಧಿಕಾರಕ್ಕೆ ಬಂದ ಮೇಲೆ ತಮ್ಮ ಸ್ವಾರ್ಥ ದೃಷ್ಟಿಯಿಂದ ಏಕೀಕರಣವನ್ನು ವಿರೋಧಿಸಿದರು. ಈ ಸಂಕುಚಿತ ಭಾವನೆಯಿಂದ ಮೈಸೂರು ಅಸೆಂಬ್ಲಿಯು ದೀರ್ಘಕಾಲದ ತನಕ ಒಂದು ನಿರ್ದಿಷ್ಟ ತೀರ್ಮಾನಕ್ಕೆ ಬರಲು ಸಾಧ್ಯವಾಗಲಿಲ್ಲ. ದೇಶದ ನಾನಾ ಕಡೆಗಳಲ್ಲಿ ಏಕೀಕರಣಪರ ಮತ್ತು ವಿರೋಧ ತಂಡಗಳಲ್ಲಿ ಘರ್ಷಣೆಗಳೂ ನಡೆದುವು. ಜಾತೀಯತೆಯ ವಿಷವೂ ಹರಡಿತು.

"ದಕ್ಷಿಣ ಪ್ರದೇಶ" ಧಾಳಿಯ ಪ್ರತಿಭಟನೆ

ದೀರ್ಘಕಾಲದ ಈ ಹೋರಾಟದ ಫಲವಾಗಿ ನಮಗೀಗ ಕರ್ನಾಟಕ ರಾಜ್ಯ ಬಂದಿದೆ. ಇದು ಕಾಂಗ್ರೆಸ್ಸಿನ ಪ್ರಯತ್ನದಿಂದ ಬಂದುದಲ್ಲ. ಭಾಷಾವಾರು ಪ್ರಾಂತ ರಚನೆಯ ಬೇಡಿಕೆಯು "ದೇಶದ್ರೋಹಕರ"ವೆಂದೂ, "ಪ್ರತಿಗಾಮಿ" ಎಂದೂ ನೆಹರೂ ಮತ್ತಿತರ ನಾಯಕರು ಪ್ರತಿಪಾದಿಸಿದರು. ಹಿಂದಿನ ವಾಗ್ದಾನಗಳಿಗೆ ತಿಲಾಂಜಲಿ ಕೊಟ್ಟರು. ಪಾರ್ಲಿಮೆಂಟಿನಲ್ಲಿ ಪ್ರಾಂತ ಪುನರ್ವಿಂಗಡನೆಯ ಚರ್ಚೆ ಮುಗಿಯುವ ತನಕವೂ ಬಹುಭಾಷಾ ಪ್ರಾಂತ ರಚನೆಯನ್ನು ಜನತೆಯ ಮೇಲೆ ಹೊರಿಸುವ ಪಿತೂರಿ ಕೇಂದ್ರದಲ್ಲಿ ನಡೆಯುತ್ತಿತ್ತು. ಕರ್ನಾಟಕ ಪ್ರಾಂತ ಕೈಗೂಡುವ ಸಮಯ ಬಂದಾಗ, ಕೇರಳ - ಕರ್ನಾಟಕಗಳ ಅಥವಾ ಕರ್ನಾಟಕ-ಆಂಧ್ರಗಳನ್ನೊಳಗೊಂಡ ದಕ್ಷಿಣ ಪ್ರದೇಶಗಳ ರಚನೆಯ ವಿಶ್ವಯತ್ನ ನಡೆಯಿತು. ಈ ಗಂಡಾಂತರವನ್ನು ಜನತೆ ಯಶಸ್ವಿಯಾಗಿ ಎದುರಿಸಬೇಕಾಗಿ ಬಂತು ಪ್ರತಿಭಟನೆ ಪ್ರದರ್ಶನಗಳು ಎಲ್ಲೆಡೆಗಳಲ್ಲಿಯೂ ನಡೆಯಿತು.

ಹೀಗೆ ಪ್ರತಿ ಹೆಜ್ಜೆಗೂ ಜನತೆ ಕರ್ನಾಟಕ ಏಕೀಕರಣಕ್ಕೆ ಕಾಂಗ್ರೆಸ್ ವಿರುದ್ಧ ಹೋರಾಡಬೇಕಾಯಿತು. ಕರ್ನಾಟಕ ಕಾಂಗ್ರೆಸ್ ನಾಯಕರು ಕನ್ನಡ ನಾಡಿಗೆ ದ್ರೋಹವೆಸಗಿದ್ದನ್ನು ಜನ ಮರೆಯುವಂತಿಲ್ಲ.

ಪ್ರಜಾಪ್ರಭುತ್ವ ಐಕ್ಯತೆಗೆ ನಾಂದಿ

ಏಕೀಕರಣ ಹೋರಾಟ ಕನ್ನಡಿಗರ ಜೀವನ್ಮರಣ ಹೋರಾಟವಾಗಿತ್ತು. ಈ ಹೋರಾಟದಲ್ಲಿ ಒಂದು ಘಟ್ಟದ ತನಕ ಕಾಂಗ್ರೆಸ್ ನಾಯಕತ್ವದಲ್ಲಿ ಇಡೀ ಜನತೆ ಒಂದಾಗಿ ಹೋರಾಡಿತು. ಆದರೆ 1953ರ ನಂತರ ಈ ಹೋರಾಟಕ್ಕೆ ಕಾಂಗ್ರೆಸ್ಸೇತರ ಪಕ್ಷಗಳು ನಾಯಕತ್ವ ಕೊಡಬೇಕಾಯಿತು. ಇದರ ಪರಿಣಾಮವಾಗಿ ಕರ್ನಾಟಕದಲ್ಲಿ ಪ್ರಜಾಪ್ರಭುತ್ವ ಶಕ್ತಿಗಳು ಬೆಳೆದಿವೆ ಐಕ್ಯತೆಯಿಂದ ಯಶಸ್ವಿಯಾಗಿ ಹೋರಾಡಿದ ಅನುಭವವೂ ಇದೆ. ಪ್ರಜಾಪ್ರಭುತ್ವ ಶಕ್ತಿಗಳ ಮತ್ತು ಪಕ್ಷಗಳ ಈ ಐಕ್ಯತೆಯನ್ನು, ಜನತೆಯ ಮುಂದಿರುವ ಸಮಸ್ಯೆಗಳನ್ನು ಬಗೆಹರಿಸುವ, ನೂತನ ಪ್ರಾಂತದಲ್ಲಿ ಜನತೆಯ ಹಿತರಕ್ಷಿಸುವ ಸಲುವಾಗಿ ಬಲಗೊಳಿಸಿ ಮುಂದುವರಿಸುವುದು ಅಗತ್ಯ. ಐಕ್ಯ ಹೋರಾಟ ಏಕೀಕರಣವನ್ನು ಸಾಧಿಸಿತು. ಮುಂಬರುವ ಚುನಾವಣೆಯಲ್ಲೂ ಎಲ್ಲ ಕಾಂಗ್ರೆಸ್ಸೇತರ ಪ್ರಜಾಪ್ರಭುತ್ವವಾದಿ ಶಕ್ತಿಗಳು ಒಂದುಗೂಡಿ ಹೋರಾಡಲು ಐಕ್ಯಗೊಳ್ಳುವುದು ಅಗತ್ಯ.

ಪ್ರತಿಯೊಂದು ಘಟ್ಟದಲ್ಲಿಯೂ ಕಮ್ಯೂನಿಸ್ಟ್ ಪಾರ್ಟಿಯು ಏಕೀಕರಣಕ್ಕೆ ಹೋರಾಡಿಕೊಂಡು ಬಂದಿದೆ. ಪ್ರಜಾಪ್ರಭುತ್ವ ತತ್ವದ ಆಧಾರದ ಮೇಲೆ ಎಲ್ಲ ವರ್ಗಗಳನ್ನೂ, ಪಕ್ಷಗಳನ್ನೂ ಒಂದುಗೂಡಿಸಿ ಹೋರಾಡಲು ಪ್ರಯತ್ನಿಸಿದೆ. ನಾಡಿನ ಅಭಿವೃದ್ಧಿಗಾಗಿ ಈ ಐಕ್ಯ ಹೋರಾಟವು ಮುಂದುವರಿಯಲಿ.

●

ಪಕ್ಷದ ಮಂಗಳೂರು ತಾಲ್ಲೂಕು ಸಮ್ಮೇಳನ

ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಕ್ಷದ ಮಂಗಳೂರು ತಾಲ್ಲೂಕು ಸಮ್ಮೇಳನ ತಾ. 19-10-81ರಂದು ಕೊಲ್ಯ ಕುಲಾಲ ಮಂದಿರದಲ್ಲಿ ಜರುಗಿತು. ತಾಲ್ಲೂಕು ಸಮಿತಿ ಕಾರ್ಯದರ್ಶಿ ಕಾಂ. ಯು. ಜನಾರ್ಧನ ನಾಯಕ್ ಸ್ವಾಗತಿಸಿದರು. ಸಮ್ಮೇಳನದ ಅಧ್ಯಕ್ಷ ಮಂಡಳಿಗೆ ಎ. ಐತಪ್ಪ, ಬಿ. ಮಾಧವ ಮತ್ತು ಪಾವೂರು ಬಾಬು ಇವರನ್ನು ಆರಿಸಲಾಯಿತು.

ಪ್ರಾರಂಭದಲ್ಲಿ ಕಳೆದ ಸಮ್ಮೇಳನದ ನಂತರ ಹುತಾತ್ಮರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ರಾಜ್ಯಸಮಿತಿಯ ಸೆಕ್ರೆಟಾರಿಯೇಟ್ ಸದಸ್ಯ ಕಾಂ. ಪಿ. ರಾಮಚಂದ್ರರಾವ್ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಾ ಅಂತರ್ರಾಷ್ಟ್ರೀಯ ಮತ್ತು ರಾಷ್ಟ್ರೀಯ ಪರಿಸ್ಥಿತಿ ಬಗ್ಗೆ ವಿವರಿಸಿ ಪಾರ್ಟಿ ಸದಸ್ಯರ ಮುಂದಿರುವ ಕರ್ತವ್ಯಗಳನ್ನು ತಿಳಿಸಿದರು.

ಕಾರ್ಯದರ್ಶಿ ಕಾಂ. ಜನಾರ್ಧನ ನಾಯಕ್‌ರವರು ಕಳೆದ ಸಮ್ಮೇಳನದ ನಂತರದ ವರದಿಯನ್ನು ಮಂಡಿಸಿದರು. ವರದಿಯ ಮೇಲೆ ಚರ್ಚೆ ನಡೆದು ಕೆಲವು ತಿದ್ದುಪಡಿಯೊಂದಿಗೆ ವರದಿಯು ಸರ್ವಾನುಮತದಿಂದ ಅಂಗೀಕೃತವಾಯಿತು.

ದ.ಕ. ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ. ಕೆ. ಆರ್. ಶ್ರೀಯಾನ್ ದೇಶದ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿ ಪಾರ್ಟಿಯ ಧೋರಣೆಯು ಜನಸಾಮಾನ್ಯರ ಹಿತಸಾಧಿಸುವ ಹಾದಿಯಲ್ಲಿ ಮುಂದುವರಿದುದನ್ನು ವಿವರಿಸಿದರು.

ಸಮ್ಮೇಳನದಲ್ಲಿ ಈ ಕೆಳಗಿನ ಠರಾವುಗಳನ್ನು ಅಂಗೀಕರಿಸಲಾಯಿತು.

1. ಅವಶ್ಯಕ ಸೇವಾ ನಿರ್ವಹಣಾ ಕಾನೂನಿನ ವಿರುದ್ಧ.
2. ಬೆಲೆಏರಿಕೆ ವಿರುದ್ಧ.
3. ಟ್ರಿಬ್ಯೂನಲ್‌ಗಳಲ್ಲಿ ನಡೆಯುವ ಭ್ರಷ್ಟಾಚಾರದ ವಿರುದ್ಧ.
4. ನ್ಯಾಯಬೆಲೆ ಅಂಗಡಿಗಳಲ್ಲಿ ಆಹಾರ ಸಾಮಗ್ರಿಗಳು ಸರಿಯಾಗಿ ಸಿಗದಿರುವ ಕುರಿತು.
5. ಸಹಕಾರೀ ಸಂಘಗಳಲ್ಲಿ ಸರಕಾರವು ಡೈರೆಕ್ಟರರುಗಳನ್ನು ನಾಮಕರಣ ಮಾಡುವುದರ ವಿರುದ್ಧ.

ಸಮ್ಮೇಳನದಲ್ಲಿ ಕಾಂ. ಜನಾರ್ಧನ ನಾಯಕ್‌ರವರು ಕಾರ್ಯದರ್ಶಿಯಾಗಿರುವ 15 ಮಂದಿಯ ತಾಲ್ಲೂಕು ಸಮಿತಿಯನ್ನು ಆರಿಸಲಾಯಿತು. ನವೆಂಬರ್ 15 ಮತ್ತು 16ರಂದು ಕುಂದಾಪುರದಲ್ಲಿ ನಡೆಯಲಿರುವ ಜಿಲ್ಲಾ ಸಮ್ಮೇಳನಕ್ಕೆ ಈ ತಾಲ್ಲೂಕಿನಿಂದ 50 ಮಂದಿ ಪ್ರತಿನಿಧಿಗಳನ್ನು ಆರಿಸಲಾಯಿತು. ●

ಶ್ರದ್ಧಾಂಜಲಿ

ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಕ್ಷದ ಮಂಗಳೂರು ತಾಲ್ಲೂಕಿನಲ್ಲಿರುವ ಗೋರಿಗುಡ್ಡೆ ಪ್ರದೇಶದ ಶಾಖೆಯ ಸಭೆ ಸೇರಿ ಸದ್ರಿ ಶಾಖೆಯ ಸದಸ್ಯರೂ, ಮಂಗಳೂರು ಬೀಡಿಕೆಲಸಗಾರರ ಸಂಘದ ಉಪಾಧ್ಯಕ್ಷಿಯಾಗಿದ್ದ ಕಾಂ. ಸೇಸಮ್ಮರವರು ತಾ. 15-10-81ನೇ ಗುರುವಾರ ಮೃತಪಟ್ಟಿರುವುದರ ಸಂಬಂಧ ಸಂತಾಪ ವ್ಯಕ್ತಪಡಿಸುವುದರೊಂದಿಗೆ ಕಾಂ. ಸೇಸಮ್ಮರವರನ್ನು ಕಳಕೊಂಡ ಅವರ ಕುಟುಂಬದವರ ದುಃಖದಲ್ಲಿ ತಮ್ಮ ಅನುಕಂಪವನ್ನು ವ್ಯಕ್ತಪಡಿಸಿತು. ಕಾಂ. ಸೇಸಮ್ಮರವರ ಮರಣವು ಗೋರಿಗುಡ್ಡೆ ಶಾಖೆಗೆ ತುಂಬಲಾರದ ನಷ್ಟವಾಗಿದೆ.

●

ರೈತರ ಬೃಹತ್ ಪ್ರದರ್ಶನ

ಭೂನ್ಯಾಯ ಮಂಡಳಿಗಳಲ್ಲಿ ನಡೆಯುತ್ತಿರುವ ನಿರಂತರ ಭ್ರಷ್ಟಾಚಾರವನ್ನು ಪ್ರತಿಭಟಿಸಿ 20-10-81 ರಂದು ಬಿಜಾಪುರದಲ್ಲಿ ಜಿಲ್ಲಾ ರೈತ ಸಂಘದ ನೇತೃತ್ವದಲ್ಲಿ ಬೃಹತ್ ಮಂತ ಪ್ರದರ್ಶನ ನಡೆಸಲಾಯಿತು.

ಪ್ರದರ್ಶನಕಾರರು ಭೂನ್ಯಾಯ ಮಂಡಳಿ ವಿರುದ್ಧ ಘೋಷಣೆ ಕೂಗುತ್ತಾ ಮೆರವಣಿಗೆ ನಡೆಸಿದರು.

ನಂತರ ನಡೆದ ಸಭೆಯನ್ನುದ್ದೇಶಿಸಿ ಮಾತನಾಡಿದ ಜಿಲ್ಲಾ ರೈತ ಸಂಘದ ಅಧ್ಯಕ್ಷ ಕಾಂ. ಭೀಮಸೀ ಕಲಾದಗಿ ಮತ್ತು ಎನ್. ಕೆ. ಉಪಾಧ್ಯಾಯ ಅವರು ಮಾತನಾಡುತ್ತಾ ನವೆಂಬರ್ ಒಂದರೊಳಗಾಗಿ ಭೂವಿವಾದಗಳ ಇತ್ಯರ್ಥವಾಗಬೇಕೆಂಬ ಆತುರದಲ್ಲಿ ಭೂನ್ಯಾಯ ಮಂಡಳಿಗಳಲ್ಲಿ ತೀವ್ರವಾದ ಭ್ರಷ್ಟಾಚಾರ ನಡೆಯುತ್ತಿರುವುದನ್ನು ತೀವ್ರವಾಗಿ ಖಂಡಿಸಿದರು. ●

ಹರಿಜನರಿಂದ ದೇವಸ್ಥಾನ ಪ್ರವೇಶ

ದೊಡ್ಡಬಳ್ಳಾಪುರ ತಾಲ್ಲೂಕಿನ ತಳಗವಾರ್ ಗ್ರಾಮದ ಹರಿಜನರು 18-10-81ರಂದು ಸಾಮೂಹಿಕವಾಗಿ ದೇವಸ್ಥಾನ ಪ್ರವೇಶ ಮಾಡಿ ಪೂಜೆ ಸಲ್ಲಿಸಿದರು. ಇದರ ಅಂಗವಾಗಿ ದೇವಸ್ಥಾನದೆದುರು ಒಂದು ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಬೆಂಗಳೂರು ಜಿಲ್ಲಾ ರೈತ ಸಂಘದ ಅಧ್ಯಕ್ಷ ಕಾಂ. ಸಿ. ರಾಮಭದ್ರಯ್ಯನವರು ವಹಿಸಿದ್ದರು. ಕಾಂ. ರಾಮಭದ್ರಯ್ಯನವರು ಮಾತನಾಡುತ್ತಾ ಹರಿಜನರು ಸಂಘಟಿತರಾಗಬೇಕೆಂದೂ, ಬಡರೈತ ಕೂಲಿಕಾರರೊಡಗೂಡಿ ರಾಜಕೀಯ; ಆರ್ಥಿಕ, ಸಾಮಾಜಿಕ ಹೋರಾಟ ನಡೆಸಬೇಕೆಂದು ಕರೆಕೊಟ್ಟರು. ತಾಲ್ಲೂಕಿನ ಎಸ್.ಎಫ್.ಐ. ಕಾರ್ಯಕರ್ತರು ಪಾಲ್ಗೊಂಡಿದ್ದರು.

○

ಸಂಕ್ಷಿಪ್ತ ಸಮಾಚಾರಗಳು:

ಸುಳ್ಯ

ದ. ಕ. ಜಿಲ್ಲೆಯ ಸುಳ್ಯದಲ್ಲಿ 12-10-81ರಂದು ತಾಲ್ಲೂಕು ರೈತ ಸಂಘದ ಸಭೆ ನಡೆಯಿತು. ತಾಲ್ಲೂಕು ರೈತಸಂಘದ ಪ್ರಧಾನಕಾರ್ಯದರ್ಶಿ ಮೋನಪ್ಪಗೌಡರು ವರದಿ ಸಲ್ಲಿಸಿದರು. ರೈತಸಂಘದ ಅಧ್ಯಕ್ಷ ಕಾಂ. ಸೂರ್ಯನಾರಾಯಣಭಟ್‌ರು ರೈತರ ಹೋರಾಟ, ರೈತರಿಗೆ ಆಗುತ್ತಿರುವ ಅನ್ಯಾಯಗಳ ಬಗ್ಗೆ ಮಾತನಾಡಿದರು. ಟ್ರಿಬ್ಯೂನಲ್‌ನಲ್ಲಿ ನಡೆಯುವ ಅನ್ಯಾಯಗಳ ವಿರುದ್ಧ 3-11-1981ರಿಂದ ಸುಳ್ಯ ತಾಲ್ಲೂಕಿನಲ್ಲಿ ಹೋರಾಟ ಪ್ರಾರಂಭಿಸುವ ತೀರ್ಮಾನ ಕೈಗೊಳ್ಳಲಾಯಿತು. ತಾಲ್ಲೂಕು ಮಟ್ಟದ ಹೋರಾಟ ಸಮಿತಿಯನ್ನು ರಚಿಸಲಾಯಿತು. ಸಮಿತಿಗೆ ಅಧ್ಯಕ್ಷರಾಗಿ ಕಾಂ. ಸೂರ್ಯನಾರಾಯಣ ಭಟ್, ಕಾರ್ಯದರ್ಶಿಯಾಗಿ ಮೋನಪ್ಪಗೌಡ, ಉಪಕಾರ್ಯದರ್ಶಿಯಾಗಿ ಎ. ಜಯರಾಮ್ ಮತ್ತು ಭಾಸ್ಕರ ರಾವ್, ಖಜಾಂಚಿಯಾಗಿ ಕಾಂ. ಪಿ. ಕೆ. ಮೂಸ ಇವರುಗಳು ಆಯ್ಕೆಯಾಗಿದ್ದಾರೆ. ಅಲ್ಲದೇ ಸಮಿತಿಗೆ ತಾಲ್ಲೂಕಿನ ಬೇರೆಬೇರೆ ಕೇಂದ್ರಗಳಿಂದ 25 ಜನರನ್ನು ಆಯ್ಕೆಮಾಡಲಾಗಿದೆ.

ರಾಯಚೂರು

19-10-81ರಂದು ರಾಯಚೂರಿನ "ಮೈಸೂರು ಪೆಟ್ರೋ ಕೆಮಿಕಲ್ಸ್ ಎಂಪ್ಲಾಯೀಸ್ ಯೂನಿಯನ್"ನ ಸರ್ವಸದಸ್ಯರ ಸಭೆ ನಡೆಯಿತು. ನವೆಂಬರ್ 3ರಂದು ನಡೆಯಲಿರುವ ಅಖಿಲ ಭಾರತ ಪ್ರತಿಭಟನಾ ದಿನ ಆಚರಿಸಲು ಕಾರ್ಯಕ್ರಮ ರೂಪಿಸಲು ಸಭೆ ಕರೆಯಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಕೆ. ಎಸ್. ಆರ್. ಟಿ. ಸಿ. ನೌಕರರ ಸಂಘದ ಪ್ರಧಾನಕಾರ್ಯದರ್ಶಿ ಕಾಂ. ಖಮರುದ್ದೀನರು ವಹಿಸಿದ್ದರು. ಸಭೆಯನ್ನುದ್ದೇಶಿಸಿ ಕೆ. ಎಸ್. ಆರ್. ಟಿ. ಸಿ. ನೌಕರರ ಸಂಘದ ಅಧ್ಯಕ್ಷ ಕಾಂ. ರಾಮಕೃಷ್ಣ, ರಾಯಚೂರು ಜಿಲ್ಲಾ ಲಾರಿ ಡ್ರೈವರ್ಸ್ ಮತ್ತು ಕ್ಲೀನರ್ಸ್ ಸಂಘದ ಅಧ್ಯಕ್ಷ ಕಾಂ. ಪುರುಷೋತ್ತಮ, ಪೆಟ್ರೋಕೆಮಿಕಲ್ಸ್ ನೌಕರರ ಸಂಘದ ಪ್ರಧಾನಕಾರ್ಯದರ್ಶಿ ಕಾಂ. ವಿಷಕಂಠಯ್ಯ ಮೊದಲಾದವರು ಮಾತನಾಡಿದರು.

ಚಿಕ್ಕಬಳ್ಳಾಪುರ

ಚಿಕ್ಕಬಳ್ಳಾಪುರದಲ್ಲಿ ಇತ್ತೀಚೆಗೆ ವಿಪರೀತ ಮಳೆಯಿಂದಾಗಿ ಅನೇಕರು ಮನೆಗಳನ್ನು, ಗುಡಿಸಲುಗಳನ್ನು ಕಳೆದುಕೊಂಡಿದ್ದಾರೆ. ನಮ್ಮ ಘನ ಸರಕಾರ ನೊಂದವರಿಗೆ ಪರಿಹಾರ ನೀಡಿಲ್ಲ. ಇದನ್ನು ಪ್ರತಿಭಟಿಸಿ ಗುಡಿಸಲು ನಿವಾಸಿಗಳು 22-10-81ರಂದು ಕಾಂ. ಲಕ್ಷ್ಮಯ್ಯನವರ ನೇತೃತ್ವದಲ್ಲಿ ತಹಸೀಲ್ದಾರರು ಮತ್ತು ಸ್ಪೆಶಲ್ ಡೆಪ್ಯೂಟಿ ಕಮೀಷನರರಲ್ಲಿ ತೆರಳಿ ಪರಿಹಾರ ಧನಕ್ಕಾಗಿ ಒತ್ತಾಯಿಸಿದರು. ಕೊನೆಗೆ ಒತ್ತಾಯಕ್ಕೆ ಮಣಿದ ತಹಸೀಲ್ದಾರರು ಸ್ಥಳದಲ್ಲೇ 5 ಸಾವಿರ ರೂ. ಪರಿಹಾರ ಧನವನ್ನು ವಿತರಣೆ ಮಾಡಿದರು.

ಮಂಗಳೂರು

16-10-81ರಂದು ಮಂಗಳೂರಿನಲ್ಲಿ ಮೋಟಾರ್ ಟ್ರಾನ್ಸ್‌ಪೋರ್ಟ್ ಅಂಡ್ ಇಂಜಿನೀಯರಿಂಗ್ ವರ್ಕರ್ಸ್ ಯೂನಿಯನ್ನಿನ ಕಾರ್ಯಕಾರಿ ಸಮಿತಿಯ ಸಭೆ ನಡೆಯಿತು. ಕಾಂ. ಮೋನಪ್ಪನವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. 1-9-81ರಂದು ಅಸಿಸ್ಟೆಂಟ್ ಲೇಬರ್ ಕಮೀಷನರರ ಸಮ್ಮುಖದಲ್ಲಿ ವೇತನ ಹೆಚ್ಚಳ ಕುರಿತಾದ ಒಪ್ಪಂದವನ್ನು ಎಲ್ಲ ಬಸ್ ಮಾಲೀಕರು ಜಾರಿಗೆ ತಂದಿರುವುದನ್ನು ಗಮನಿಸಲಾಯಿತು. ಕೆಲವರು ಕನಿಷ್ಠ ಸಂಬಳ ಕೂಡಾ ಕೊಡುತ್ತಿಲ್ಲ. ಹೆಚ್ಚಾದ ಸಂಬಳ, ಒಪ್ಪಂದದ ಪ್ರಕಾರ ಕೊಡಬೇಕಾದ ಭತ್ತೆ, ವಾರದ ರಜೆಯೂ ಸೇರಿದಂತೆ ವರ್ಷಕ್ಕೆ 75 ರಜೆ ಇತ್ಯಾದಿಗಳನ್ನು ಜಿಲ್ಲೆಯ ಎಲ್ಲಾ ಬಸ್ ಮಾಲೀಕರು ಜಾರಿಗೊಳಿಸುವಂತೆ ಒತ್ತಾಯಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಯಿತು.

ಶಿವಮೊಗ್ಗ

ಸೌದೆ ಬೆಲೆಯು ಟನ್ ಒಂದಕ್ಕೆ 100 ರೂ. ಇದ್ದುದು ಒಂದೇ ಸಮನೆ ಏರುತ್ತಾ ಇದೆ. ಟನ್ ಸೌದೆಗೆ 206 ರೂ.ಗಳವರೆಗೆ ಹೆಚ್ಚಿಸಲಾಗಿದೆ. ಇದನ್ನು ಪ್ರತಿಭಟಿಸಿ ಪ್ರಗತಿಪರ ಜನತಂತ್ರರಂಗದ ಶಿವಮೊಗ್ಗ ಘಟಕದ ಆಶ್ರಯದಲ್ಲಿ ಶಿವಮೊಗ್ಗದಲ್ಲಿ 21-10-81ರಂದು ಬಂದ್‌ಗೆ ಕರೆ ನೀಡಲಾಗಿತ್ತು. ಇದರ ಅಂಗವಾಗಿ ಶಿವಮೊಗ್ಗದ ರಾಮಣ್ಣಶೆಟ್ಟಿ ಪಾರ್ಕ್‌ನಿಂದ ಸುಮಾರು 2000 ಜನರ ಪ್ರತಿಭಟನಾ ಮೆರವಣಿಗೆಯನ್ನು ಹೊರಡಿಸಲಾಗಿತ್ತು. ನಗರದ ಮುಖ್ಯ ಬೀದಿಗಳಲ್ಲಿ ಸಂಚರಿಸಿದ ಮೆರವಣಿಗೆಯನ್ನು ಕೊಂಡೊಯ್ದು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ಈ ಕಾರ್ಯಕ್ರಮದ ಅಂಗವಾಗಿ ಗೋಪಿ ಸರ್ಕಲ್‌ನಲ್ಲಿ ಬಹಿರಂಗ ಸಭೆ ನಡೆಯಿತು. ಅಧ್ಯಕ್ಷತೆಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾಂ. ಚಂದೂಕಂಟ್ಟಿಯವರು ವಹಿಸಿದ್ದರು. ಸಭೆಯನ್ನುದ್ದೇಶಿಸಿ ಜನತಾದ ಶಂಕರನಾರಾಯಣ, ನರಸಿಂಹಮೂರ್ತಿ, ಲೋಕದಳದ ಎಸ್. ಕುಮಟಾ ಪುಟ್ಟಯ್ಯ, ಸಿ. ಪಿ. ಐ. (ಎಂ)ನ ಶಿವಶಂಕರ, ಕಾಂಗ್ರೆಸ್ (ಎಸ್)ನ ವಿ. ರಾಜು ಮತ್ತು ಅಂಚೆ-ತಂತಿ ನೌಕರರ ಸಂಘದ ಸಾಲೋಮನ್ ಮಾತನಾಡಿದರು.

ರಾಯಚೂರು

20-10-81ರಂದು ಜಿಲ್ಲಾ ಸಿ.ಪಿ.ಐ.(ಎಂ) ಘಟಕವು ಸಭೆಸೇರಿ "ಮಿತ್ರವಾಣಿ" ಪತ್ರಿಕೆಯ ಸಂಪಾದಕರ ಮೇಲೆ ಕಾಂಗ್ರೈನವರು ಹಲ್ಲೆ ಮಾಡಿದ್ದನ್ನು ಉಗ್ರವಾಗಿ ಖಂಡಿಸಲಾಯಿತು. ನಗರದ ಮಂಡ್ಡಿಪೇಟೆ ಕ್ಷೇತ್ರದಲ್ಲಿ ನಗರಸಭೆ ಚುನಾವಣೆ ನಡೆಯಲಿದ್ದು ಸ್ವತಂತ್ರ ಅಭ್ಯರ್ಥಿಯಾಗಿರುವ ಜಿ. ನರಸರೆಡ್ಡಿಯವರನ್ನು ಬೆಂಬಲಿಸಲು ಸಭೆ ತೀರ್ಮಾನಿಸಿತು,

ರಾಯಚೂರಿನಲ್ಲಿ ಗೂಂಡಾಗಿರಿ ದೌರ್ಜನ್ಯ ನಡೆಸಿರುವ ಕಾಂಗ್ರೈನ ಕಸಬೆ ಗುಂಪಿನ ಅಭ್ಯರ್ಥಿಯನ್ನು ಸೋಲಿಸಲು ಎಲ್ಲ ಪ್ರಜಾಪ್ರಭುತ್ವವಾದಿಗಳು ಹಾಗೂ ವಿರೋಧಿ ಪಕ್ಷಗಳು ನರಸರೆಡ್ಡಿಯವರನ್ನು ಬೆಂಬಲಿಸಬೇಕೆಂದು ಪಕ್ಷದ ಪರವಾಗಿ ಕಾಂ. ಚಂದ್ರಶೇಖರ ಬಾಳೆ ವಿನಂತಿಸಿದ್ದಾರೆ.

ಪುತ್ತೂರು

ಉಡುಪಿಯ ದೂರವಾಣಿ ಕಚೇರಿಯಲ್ಲಿ ದುಡಿಯುತ್ತಿರುವ ನಾಲ್ಕು ಜನ ನೌಕರರನ್ನು ಅವರ ಕಾರ್ಮಿಕ ಸಂಘಟನೆಯನ್ನು ಒಡೆಯುವ ಉದ್ದೇಶದಿಂದ ಬೇರೆ ವಿಭಾಗಕ್ಕೆ ವರ್ಗಾವಣೆ ಮಾಡಿರುವುದನ್ನು ಪ್ರತಿಭಟಿಸಿ ಉಡುಪಿಯಲ್ಲಿ 17-10-81ರಿಂದ ಸರದಿ ಅನ್ನಸತ್ಯಾಗ್ರಹ ಪ್ರಾರಂಭವಾಗಿದೆ. (ಐಕ್ಯರಂಗ 25-10-81)

ಈ ಸತ್ಯಾಗ್ರಹಕ್ಕೆ ಬೆಂಬಲ ಸೂಚಿಸಿ 23-10-81ರಂದು ಪುತ್ತೂರಿನ ದೂರವಾಣಿ ನೌಕರರು ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದ್ದಾರೆ. ಈ ನೌಕರರನ್ನು ಉದ್ದೇಶಿಸಿ ಪುತ್ತೂರಿನ ಬೀಡಿ ಮತ್ತು ಇತರ ಕಾರ್ಮಿಕಸಂಘದ ಅಧ್ಯಕ್ಷ ಕಾಂ. ರಾಮಕೃಷ್ಣನವರು ಮಾತನಾಡಿ ತಮ್ಮ ಮೇಲಾಗುವ ಅನ್ಯಾಯವನ್ನು ಪ್ರತಿಭಟಿಸಿ ಹೋರಾಟ ಮುಂದುವರೆಸಲು ಕರೆನೀಡಿದರು.

ಸತ್ಯಾಗ್ರಹನಿರತ ನೌಕರರನ್ನು ರಸ್ತೆ ಸಾರಿಗೆ ಸಂಸ್ಥೆಯ ಕಾರ್ಮಿಕರು, ಸಮುದಾಯ ಸಂಘಟನೆಗಳ ಕಾರ್ಯಕರ್ತರು ಬೆಂಬಲಿಸಿದ್ದಾರೆ.

●

'ಪ್ರಸ್ತುತ ಪ್ರಜಾಪ್ರಭುತ್ವ ವ್ಯವಸ್ಥೆಯಿಂದ ಭಾರತದ ಪ್ರಗತಿ ಸಾಧ್ಯವಿಲ್ಲ'

ಕಾಂ. ಲಾಲ್‌ಬಹದ್ದೂರ್ ರೈ ಸ್ಮಾರಕ ಚರ್ಚಾಸ್ಪರ್ಧೆ

22-10-1981ರಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್. ಎಫ್. ಐ.) ಬೆಂಗಳೂರು ನಗರ ಸಮಿತಿಯು ಬೆಂಗಳೂರು ವಿಶ್ವವಿದ್ಯಾಲಯ ಮಟ್ಟದಲ್ಲಿ ನಡೆಸಿದ ಕಾಂ. ಲಾಲ್‌ಬಹದ್ದೂರ್ ರಾಯ್ ಸ್ಮಾರಕ ಪ್ರಥಮ ಅಂತರ ಕಾಲೇಜು ಕನ್ನಡ ಚರ್ಚಾ ಸ್ಪರ್ಧೆಯು ಅತ್ಯಂತ ಯಶಸ್ವಿಯಾಗಿ ನಡೆಯಿತು. "ಪ್ರಸ್ತುತ ಪ್ರಜಾಪ್ರಭುತ್ವ ವ್ಯವಸ್ಥೆಯಿಂದ ಭಾರತದ ಪ್ರಗತಿ ಸಾಧ್ಯವಿಲ್ಲ" ಎಂಬ ವಿಚಾರದ ಪರ ಮತ್ತು ವಿರೋಧ ನಡೆದ ಚರ್ಚೆಯಲ್ಲಿ ವಿವಿಧ ಕಾಲೇಜುಗಳನ್ನು ಪ್ರತಿನಿಧಿಸಿದ್ದ 30 ವಿದ್ಯಾರ್ಥಿ, ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಸೆನೆಟ್ ಹಾಲ್ ಪೂರ್ಣ ಪ್ರೇಕ್ಷಕರು ನೆರೆದು ಕಾರ್ಯಕ್ರಮ ವೀಕ್ಷಿಸಿದರು.

1981ರ ಜನವರಿ 21ರಂದು ಪೋಲೀಸರ ಅಮಾನುಷ ದೌರ್ಜನ್ಯಕ್ಕೆ ಬಲಿಯಾಗಿ ಕೊನೆಯುಸಿರೆಳೆದ ಬಿಹಾರದ ಸಮಷ್ಟಿಪುರದ ಎಸ್.ಎಫ್.ಐ.ನ ಜನಪ್ರಿಯ ಮುಖಂಡರಾಗಿದ್ದ 18ರ ಯುವಕ ಕಾಂ. ಲಾಲ್‌ಬಹದ್ದೂರ್ ರಾಯ್‌ರವರ ಸ್ಮಾರಕಾರ್ಥ ಫಲಕವನ್ನು ಇರಿಸಿ ನಡೆಸಲಾದ ಚರ್ಚಾ ಸ್ಪರ್ಧೆಯನ್ನು ಇನ್ನು ಮುಂದಿನವರ್ಷಗಳಲ್ಲೂ ನಡೆಸಲು ಬೆಂಗಳೂರು ನಗರ ಎಸ್. ಎಫ್. ಐ. ನಿರ್ಧರಿಸಿದೆ.

ರಾಜ್ಯ ಎಸ್.ಎಫ್.ಐ. ಅಧ್ಯಕ್ಷರಾದ ಕಾಂ. ಆರ್. ಜಯಕುಮಾರ್ ಚರ್ಚಾ ಸ್ಪರ್ಧೆಯನ್ನು ಉದ್ಘಾಟಿಸಿದರು. ಬಂಡಾಯ ಸಾಹಿತ್ಯ ಸಂಘಟನೆಯ ಅಧ್ಯಕ್ಷರಾದ ಬರಗೂರು ರಾಮಚಂದ್ರಪ್ಪರವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಚರ್ಚಾ ಸ್ಪರ್ಧೆಯಲ್ಲಿ ನಗರದ ವಿ. ವಿ. ಪುರ ಕಾಲೇಜು ಲಾಲ್‌ಬಹದ್ದೂರ್ ರಾಯ್ ಸ್ಮಾರಕ ಫಲಕವನ್ನು ಪಡೆಯಿತು. ವಿ. ವಿ. ಪುರ ಕಾಲೇಜಿನ ವಿ.ಆರ್. ಹೆಗ್ಗಡೆ (ಪ್ರಥಮ). ಎಸ್. ಎಲ್. ಆರ್. ಸಿ. ಕಾಲೇಜಿನ ಎಲ್. ಹನುಮಂತಯ್ಯ (ದ್ವಿತೀಯ), ವಿ.ವಿ. ಪುರ ಕಾಲೇಜಿನ ಕುಮಾರಿ ತೇಜಮ್ಮ (ತೃತೀಯ) ಮತ್ತು ಸರಕಾರಿ ಕಲಾ ಕಾಲೇಜಿನ ಶ್ರೀಕಂಠ ಮೂರ್ತಿ (ನಾಲ್ಕನೇ) ಬಹುಮಾನವನ್ನು ಪಡೆದರು.

ಅಧ್ಯಕ್ಷತೆ ವಹಿಸಿದ್ದ ಬರಗೂರು ರಾಮಚಂದ್ರಪ್ಪನವರು ಬಹುಮಾನ ವಿತರಣೆ ಮಾಡಿ ಮಾತನಾಡುತ್ತಾ "ಪ್ರಸ್ತುತ ಪ್ರಜಾಪ್ರಭುತ್ವ ವ್ಯವಸ್ಥೆಯಿಂದ ಭಾರತ ಪ್ರಗತಿ ಸಾಧಿಸಿಲ್ಲವೆನ್ನುವ ವಿಚಾರ ಈಗ ಸಿದ್ಧವಾಗಿದೆ. ಜನತೆಯ ಪ್ರಜಾಪ್ರಭುತ್ವ ವ್ಯವಸ್ಥೆ ಇನ್ನೂ ಸ್ಥಾಪನೆಯಾಗದಿರುವ ಸಂದರ್ಭದಲ್ಲಿ ದೇಶದ ಸಂವಿಧಾನದಲ್ಲಿರುವ ವಿಚಾರ ಜೀವ ಕಳೆದುಕೊಂಡಿದೆ. ಸಾಮಾಜಿಕ, ಆರ್ಥಿಕ ಅಸಮಾನತೆ ಇರುವಲ್ಲಿ ಪ್ರಜಾಪ್ರಭುತ್ವಕ್ಕೆ ಯಾವ ಅರ್ಥವೂ ಇಲ್ಲ" ಎಂದರು.

ಕಾರ್ಯಕ್ರಮದ ಕೊನೆಯಲ್ಲಿ ಬೆಂಗಳೂರು ನಗರ ಎಸ್. ಎಫ್. ಐ. ಸಾಂಸ್ಕೃತಿಕ ತಂಡವು "ಭಾರತ ದರ್ಶನ" ನಾಟಕವನ್ನು ಪ್ರದರ್ಶಿಸಿತು.

○

ರೈತ ಸಮ್ಮೇಳನ

26-10-81ರಂದು ಬೆಂಗಳೂರು ಜಿಲ್ಲಾ ರೈತಸಂಘದ ಕಾರ್ಯಕಾರಿ ಸಮಿತಿಯ ಸಭೆ ಸೇರಿ ಜಿಲ್ಲಾ ರೈತ ಸಂಘದ 4ನೇ ಸಮ್ಮೇಳನವನ್ನು ಹೊಸಕೋಟೆ ತಾಲ್ಲೂಕಿನ ಸಮೇತನಹಳ್ಳಿಯಲ್ಲಿ ನಡೆಸಲು ತೀರ್ಮಾನಿಸಿದೆ.

1982 ಫೆಬ್ರವರಿಯಲ್ಲಿ ಕೋಲಾರ ಜಿಲ್ಲೆಯ ಮುಳಬಾಗಿಲುನಲ್ಲಿ ಪ್ರಾಂತ ರೈತಸಂಘದ ಸಮ್ಮೇಳನ ನಡೆಯಲಿದ್ದು ಇದರ ಪೂರ್ವಭಾವಿಯಾಗಿ ಬೆಂಗಳೂರು ಜಿಲ್ಲಾ ರೈತಸಂಘದ ಸಮ್ಮೇಳನ ನಡೆಯಲಿದೆ.

ಭೂನ್ಯಾಯ ಮಂಡಳಿಗಳಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ಮತ್ತು ವಿಳಂಬ ನೀತಿ, ಬಡರೈತರು ಸಾಗುವಳಿ ಮಾಡುತ್ತಿರುವ ಸರಕಾರಿ ಭೂಮಿಯನ್ನು ಅವರಿಗೆ ಮಂಜೂರು ಮಾಡದಿರುವುದು, ರೈತರು ಬೆಳೆದ ಬೆಳೆಗೆ ನ್ಯಾಯವಾದ ನಿಗದಿ ಬೆಲೆ ಹಾಗೂ ಗ್ರಾಮಾಂತರ ಪ್ರದೇಶದ ಜನತೆಗೆ ಸರಿಯಾದ ಪಡಿತರ ಸಿಗದಿರುವುದು ಈ ಎಲ್ಲ ಸಮಸ್ಯೆಗಳನ್ನು ಕುರಿತು ಸಮ್ಮೇಳನದಲ್ಲಿ ಚರ್ಚಿಸಿ ಹೋರಾಡಲು ಕಾರ್ಯಕ್ರಮ ರೂಪಿಸಲಾಗುವುದೆಂದು ಬೆಂಗಳೂರು ಜಿಲ್ಲಾ ರೈತ ಸಂಘ ತಿಳಿಸಿದೆ.

○

ಡಿ. ವೈ. ಎಫ್. ಐ. ಪ್ರಥಮ ಸಮ್ಮೇಳನ

ಬೆಂಗಳೂರಿನ ದೇವಾಂಗ ಸಂಘ ಸಭಾಂಗಣದಲ್ಲಿ ಪ್ರಜಾಸತ್ತಾತ್ಮಕ ಯುವಜನ ಒಕ್ಕೂಟದ ಪ್ರಥಮ ಸಮ್ಮೇಳನವು ಅಕ್ಟೋಬರ್ 26, 27 ಮತ್ತು 28ರಂದು ಜರುಗಿತು.

ಸಮ್ಮೇಳನದ ಉದ್ಘಾಟನೆಯನ್ನು ಬಂಡಾಯಸಾಹಿತ್ಯ ಸಂಘಟನೆಯ ಶ್ರೀ ಬರಗೂರು ರಾಮಚಂದ್ರಪ್ಪನವರು ನಡೆಸಿದರು. ಅಧ್ಯಕ್ಷತೆಯನ್ನು ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜಮೆಂಟಿನ (ಐ. ಐ. ಎಂ.) ಶ್ರೀ ಬಿ. ಕೆ. ಚಂದ್ರಶೇಖರ ವಹಿಸಿದ್ದರು. ಡಿ.ವೈ.ಎಫ್.ಐ ನ ಪ್ರಧಾನ ಕಾರ್ಯದರ್ಶಿ ಕಾಂ. ಹನ್ನನ ಮುಲ್ಲಾ (ಎಂ.ಪಿ.) ಆಗಮಿಸಿದ್ದರು.

ಸಮ್ಮೇಳನವನ್ನು ಉದ್ಘಾಟಿಸಿದ ಬರಗೂರು ರಾಮಚಂದ್ರಪ್ಪನವರು ಮಾತನಾಡುತ್ತಾ "ಯುವ ಜನತೆ ಇಂದು ಸಂದಿಗ್ಧತೆಯಲ್ಲಿ ಸಿಲುಕಿದೆ. ಅವರ ಶಕ್ತಿ ಸಾಮರ್ಥ್ಯಗಳು ದುರುಪಯೋಗವಾಗುತ್ತಿದೆ. ಯುವಜನತೆಯನ್ನು ಯೋಗ್ಯ ಸಂಘಟನೆಯ ಚೌಕಟ್ಟಿನಲ್ಲಿ ತಂದು ಸಮಾನತೆಗಾಗಿ ಹೋರಾಟ ಮಾಡಿದಾಗ ಮಾತ್ರ ಕನಸು ನನಸಾಗಬಲ್ಲದು".

"ಸುಳ್ಳು ಪ್ರಜಾಪ್ರಭುತ್ವದಲ್ಲಿ ಜೀವಕ್ಕೆ ಮತ್ತು ಜೀವನಕ್ಕೆ ಭದ್ರತೆ ಇಲ್ಲ. ಅನಕ್ಷರತೆ, ಅಸಮಾನತೆ ಇರುವ ಪ್ರಸಕ್ತ ವ್ಯವಸ್ಥೆಯನ್ನು ಬದಲಾಯಿಸಲು ಯುವಜನರು ಕಂಕಣಬದ್ಧರಾಗಬೇಕು. ಮೂಲಭೂತಹಕ್ಕುಗಳ ಹರಣ ಮಾತ್ರ ನಡೆಯುತ್ತಿದೆ. ಮೂಲಭೂತ ಹಕ್ಕುಗಳಿಗೋಸ್ಕರ ನಡೆಯುವ ಹೋರಾಟದಲ್ಲಿ ಯುವ ಜನತೆ ಮುಂಚೂಣಿಯಲ್ಲಿರಬೇಕು" ಎಂದು ರಾಮಚಂದ್ರಪ್ಪ ತಿಳಿಸಿದರು.

ರಾಜ್ಯದಲ್ಲಿ ಸಂಸ್ಕೃತಕ್ಕೆ ಪ್ರಥಮ ಭಾಷೆಯ ಪಟ್ಟಕಟ್ಟಲು ಹವಣಿಸುತ್ತಿರುವ ಪ್ರಯತ್ನಗಳನ್ನು ಕಟುವಾಗಿ ಟೀಕಿಸಿದ ರಾಮಚಂದ್ರಪ್ಪನವರು ಜನತೆಯ ಭಾಷೆಗಾಗಿ ಹೋರಾಡಬೇಕು. ದೇವಭಾಷೆಯಾದ (ಜನತೆಗೆ ಸಂಪರ್ಕವಿಲ್ಲದ) ಸಂಸ್ಕೃತದ ಹೆಸರಿನಲ್ಲಿ ಗಳಿಸುತ್ತಿರುವ ಜಡಮೌಲ್ಯಗಳನ್ನು ಉಳಿಸಲು ಹೆಣಗುತ್ತಿರುವ ಪಟ್ಟಭದ್ರರ ಕುಯುಕ್ತಿಗಳನ್ನು ಬಯಲಿಗೆಳೆದರು.

ಬಾಲ್ಯವಿವಾಹ ಮುಂತಾದ ಸಾಮಾಜಿಕ ಅನಿಷ್ಟಗಳ ಕುರಿತು ಯುವಜನರು ನಿರಂತರ ಸಮರ ಹೂಡಬೇಕು ಎಂದು ತಿಳಿಸಿದ ರಾಮಚಂದ್ರಪ್ಪನವರು ಸ್ಪಷ್ಟವಾದ ದಿಕ್ಕನ್ನು ತೋರಿಸುವ ದಿಶೆಯಲ್ಲಿ ಡಿ.ವೈ.ಎಫ್.ಐ. ಸಂಘಟನೆ ಮುನ್ನಡೆಯಲಿ ಎಂದು ಹರಸಿದರು.

ಅಧ್ಯಕ್ಷತೆಯನ್ನು ವಹಿಸಿದ ಶ್ರೀ ಬಿ. ಕೆ. ಚಂದ್ರಶೇಖರ ಅವರು ಮಾತನಾಡುತ್ತಾ ಯುವಜನತೆ ಸಮಸ್ಯೆಗಳಿಗೆ ವೈಜ್ಞಾನಿಕ ಪರಿಹಾರಗಳನ್ನು ಕಂಡುಹಿಡಿಯಲು ಈ ದಿಸೆಯಲ್ಲಿ ಹೋರಾಡಲು ಸಿದ್ಧರಾಗಬೇಕು" ಎಂದರು.

ಶ್ರೀಚಂದ್ರಶೇಖರ ಅವರುಮುಂದುವರೆದು ಯುವಜನರು ಜಿಜ್ಞಾಸೆ ಮನೋಭಾವವನ್ನು ಬೆಳೆಸಿಕೊಂಡಾಗ ಮಾತ್ರ ಸಾಂಪ್ರದಾಯಕ ಮೌಲ್ಯಗಳ ವಿರುದ್ಧ ಹೋರಾಡಲು ಸಾಧ್ಯ ಎಂದರು.

ಆರಂಭದಲ್ಲಿ ಡಿ. ವೈ. ಎಫ್. ಐ. ರಾಜ್ಯ ಸಂಚಾಲಕ ಕಾಂ. ಜಿ. ವಿ. ಶ್ರೀರಾಮರೆಡ್ಡಿಯವರು ಮಾತನಾಡಿ ಸಮ್ಮೇಳನದ ಮಹತ್ವ ಮತ್ತು ಯುವಜನರು ನಿರ್ವಹಿಸಬೇಕಾದ ಹೊಣೆಗಾರಿಕೆ ಕುರಿತು ತಿಳಿಸಿದರು.

ನಂತರ ಸಮ್ಮೇಳನಕ್ಕೆ ಪ್ರಾಂತ ರೈತಸಂಘದ ಕಾಂ. ಪಿ. ಜಗನ್ನಾಥ, ಅಟೋಚಾಲಕರ ಸಂಘದ ಕಾಂ. ರಮೇಶ್, ಎಸ್. ಎಫ್. ಐ.ನ ಕಾಂ. ಜಯಕುಮಾರ, ಎ.ಐ.ಯು.ಎಫ್.ನ ಕಾಂ. ಶಿವಶಂಕರ ಮೊದಲಾದವರು ಶುಭಕೋರಿದರು.

ಮಧ್ಯಾಹ್ನದ ಪ್ರತಿನಿಧಿಗಳ ಸಮ್ಮೇಳನವು ಬೆಂಗಳೂರಿನ ಶಿವರಾಂ, ದ.ಕ.ದ ರಮೇಶ್ ಬಿ. ಬಂಟ್ವಾಳ, ಮೈಸೂರಿನ ಮೋಹನ್‌ಕುಮಾರರ ಅಧ್ಯಕ್ಷ ಮಂಡಳಿಯಲ್ಲಿ ನಡೆಯಿತು. ಅಧಿವೇಶನವನ್ನು ಉದ್ದೇಶಿಸಿ ಅಖಿಲ ಭಾರತ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಪ್ರಧಾನಕಾರ್ಯದರ್ಶಿ ಕಾ. ಹನನ್‌ಮುಲ್ಲ ಮಾತನಾಡಿದರು.

"ಸ್ವಾತಂತ್ರ್ಯಪೂರ್ವದಿಂದಲೂ ವ್ಯವಸ್ಥೆಯ ಬದಲಾವಣೆಗೆ ಯುವಜನ ಹೋರಾಟ ನಡೆಸಿಕೊಂಡು ಬಂದಿದೆ. ಆದರೆ ಇಂದು ಈ ಯುವಜನತೆಗೆ ಹೊಸದೊಂದು ಸಂಘಟನೆಯ ಅವಶ್ಯಕತೆಯಿದೆ" ಎಂದರು. ಮುಂದುವರೆದ ಅವರು ಈ ಅವಶ್ಯಕತೆಯನ್ನು ಕುರಿತು "ಇಂದು ಯುವಜನರದು ಕಾಂಗ್ರೆಸ್‌ಗಳ ಯುವಜನ ಸಂಘ, ಸಂಜಯಗಾಂಧಿ ಯುವಜನ ಸಂಘ, ಇಲ್ಲವೇ ಆರ್.ಎಸ್.ಎಸ್., ಜಮಾತೆ ಇಸ್ಲಾಂ, ಇಸ್ಲಾಂ ಸ್ಟೂಡೆಂಟ್ಸ್ ಮೂವ್‌ಮೆಂಟ್ಸ್ ಈ ರೀತಿಯಾಗಿ ಯಾವುದೋ ಒಂದು ರಾಜಕೀಯ ಪಕ್ಷಕ್ಕೆ. ಯಾವುದೋ ಒಂದು ವ್ಯಕ್ತಿಗಾಗಿ, ಅಥವಾ ಯಾವುದೋ ಒಂದು ಜಾತಿ, ಧರ್ಮ, ಮತಗಳಲ್ಲಿ ಸಂಘಟಿತರಾಗುತ್ತಿದ್ದಾರೆ. ಈ ಯಾವುದೇ ಸಂಘಟನೆ ಪಟ್ಟಭದ್ರ ಹಿತಾಸಕ್ತಿಯ, ಅಂಧಾಭಿಮಾನದ ಇಲ್ಲವೆ ಜಾತೀಯ ಆಧಾರಗಳ ಸಂಘಟನೆಯಾಗಿದ್ದು ಇವುಗಳ ಉದ್ದೇಶ ಯುವಜನತೆಯನ್ನು ಐಕ್ಯಹೋರಾಟದಲ್ಲಿ ಸಂಗಮಿಸುವುದನ್ನು ತಡೆಯುವುದೇ ಆಗಿದೆ, ಅವರ ನೈಜ ಸಮಸ್ಯೆಗಳಿಂದ ದೂರವಿಡುವುದೇ ಆಗಿದೆ. ಇಂತಹ ಒಡಕು ಸಂಘಟನೆಗಳನ್ನು ರಾಜಕೀಯ ಕುತಂತ್ರಗಳಿಂದ ಆಡಳಿತ ಪೋಷಿಸುತ್ತಿದೆ. ತರುಣ್ ಘೂರ್ಕಾಸ್ ಪ್ರತ್ಯೇಕ ನೇಪಾಳಿ ರಾಜ್ಯಕ್ಕೆ, ಮರಾಠಿಗಳಲ್ಲದವರ ವಿರುದ್ಧ ಶಿವಸೇನೆ. ಮಧ್ಯಪ್ರದೇಶದಲ್ಲಿ ಛತ್ತೀಸ್‌ಘರ್ ಮುಕ್ತಿಮೋರ್ಚಾ, ಮಹಾರಾಷ್ಟ್ರದಲ್ಲಿ ಮರಾಠಿಗರಿಗೆ ಕೆಲಸ ಕರ್ನಾಟಕದಲ್ಲಿ ಕನ್ನಡಿಗರಿಗೇ ಕೆಲಸ ಇಂತಹವು ಯುವಜನರನ್ನು ಅವರ ನಿಜವಾದ ಅವಶ್ಯಕತೆಗಳಿಂದ ನಿಜವಾದ ಸಮಸ್ಯೆಗಳಿಂದ ದೂರವಿಡುವುದೇ ಆಗಿದೆ. ಈ ಎಲ್ಲ ಕುತಂತ್ರಗಳಿಗೆ ಹೊರತಾಗಿ, ದೇಶದ ವಿಚ್ಛಿದ್ರಕಾರಿ ಶಕ್ತಿಗಳ ಹೊರತಾಗಿ ಯುವಕರನ್ನು ಐಕ್ಯಹೋರಾಟಕ್ಕೆ ನೈಜ ಸಮಸ್ಯೆಗಳಿಗಾಗಿ ಅಣಿಗೊಳಿಸುವ ಉದ್ದೇಶದಿಂದ ಪ್ರಜಾಸತ್ತಾತ್ಮಕ ತಾತ್ವಿಕ ನೆಲೆಯ ಈ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯು ಸ್ಥಾಪನೆಯಾಯಿತು ಎಂದರು. ಮುಂದುವರಿದ ಅವರು "ನಮ್ಮಲ್ಲಿ ಸಂಘಟಿತರಾಗದ ಯುವಜನ ಶೇ. 60ರಷ್ಟು ಇದ್ದಾರೆ. ಅವರ ಬಳಿಗೆ ನಾವು ಇಂದು ಹೋಗಬೇಕಿದೆ ಇತರರನ್ನು ತಮ್ಮ ಸಮಸ್ಯೆಗಳಿಗಾಗಿ ಜಾಗೃತಗೊಳಿಸಬೇಕಿದೆ. ಈ ಸಂಘಟನೆಯು ಸೈದ್ಧಾಂತಿಕ ಸಮಸ್ಯೆಗಳನ್ನು ಒಪ್ಪಿಕೊಳ್ಳುವ ಎಲ್ಲರೂ ಇಲ್ಲಿ ಬರಬಹುದು. ಇದು ಯಾವುದೇ ರಾಜಕೀಯ ಪಕ್ಷದ ಸಂಘಟನೆಯಲ್ಲ, ಚುನಾವಣೆಗಳಿಗಾಗಿ ಆದ ಸಂಘಟನೆಯಲ್ಲ. ಈ ಸಂಘಟನೆಗೆ ಯುವಜನರದ್ದೇ ಆದ ಮೂಲಭೂತ ಸಮಸ್ಯೆಗಳಿವೆ, ಅವಕ್ಕೆ ಕಾರ್ಯಕ್ರಮಗಳಿವೆ ಮತ್ತು ಅವುಗಳಿಗೆ ಮಾತ್ರ ಬದ್ಧವಾಗಿದೆ. ನಮ್ಮ ಡಿ. ವೈ. ಎಫ್. ಐ.ನ ಧ್ವಜದ ಬಿಳಿಯ ಬಣ್ಣ ಜನತೆಯ ವಿವಿಧ ವರ್ಣಗಳನ್ನು, ನಕ್ಷತ್ರ ಉಜ್ವಲ ಭವಿಷ್ಯವನ್ನು ಅವರ ಐದು ಮೂಲೆಗಳು ಅಂತರರಾಷ್ಟ್ರೀಯ ಸಂಬಂಧಗಳನ್ನು ಸೂಚಿಸುತ್ತದೆ" ಎಂದರು.

ಪ್ರಥಮ ರಾಜ್ಯ ಸಮ್ಮೇಳನದ ವರದಿಯನ್ನು ಮಂಡಿಸಿದ ಭಾರತ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಕರ್ನಾಟಕ ರಾಜ್ಯದ ಸಂಚಾಲಕ ಜಿ. ವಿ. ಶ್ರೀರಾಮರೆಡ್ಡಿ "ಪ್ರಜಾಪ್ರಭುತ್ವ ಶಕ್ತಿಗಳ ದಮನದಲ್ಲಿ ತೊಡಗಿರುವ ಸಾಮ್ರಾಜ್ಯಶಾಹಿ ರಾಷ್ಟ್ರಗಳ ಬಗ್ಗೆ ಯು ಯುವಜನರು ಎಚ್ಚರವಾಗಿರಬೇಕೆಂದರು. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಯುದ್ಧದ ಕಾರ್ಮೋಡಗಳು ಕವಿಯುತ್ತಿದೆ. ಬಾಂಗ್ಲ, ಪಾಕಿಸ್ಥಾನ, ಶ್ರೀಲಂಕದಂತ ಸರ್ವಾಧಿಕಾರವುಳ್ಳ ರಾಷ್ಟ್ರಗಳಿಗೆ ಅಮೇರಿಕ ಯುದ್ಧಾಸ್ತ್ರಗಳನ್ನು ಒದಗಿಸುತ್ತಿದೆ. ಇದರ ಉದ್ದೇಶ ಪ್ರಜಾಪ್ರಭುತ್ವ ಶಕ್ತಿಗಳ ದಮನವಲ್ಲದೆ ಬೇರೇನಲ್ಲ ಎಂದರು. ಮುಂದುವರೆದ ಅವರು ಸಾಮ್ರಾಜ್ಯಶಾಹಿಗಳು ತಮ್ಮ ಹಿಡಿತವನ್ನು ಇತರ ರಾಷ್ಟ್ರಗಳಲ್ಲಿ ಬೆಳೆಸುತ್ತಿರುವ ಬಗ್ಗೆ ಮಾತನಾಡುತ್ತ "ಅಂತರ ರಾಷ್ಟ್ರೀಯ ಹಣಕಾಸು ಸಂಸ್ಥೆಯಲ್ಲಿ 5000ಕೋಟಿರೂ. ಸಾಲ ಪಡೆಯುವ ಬಗ್ಗೆ 14 ನಿಬಂಧನೆಗಳನ್ನು ಹಾಕಿದೆ. ದೇಶದಲ್ಲಿ ಕೈಗಾರಿಕಾ ಶಾಂತಿಯಿರಬೇಕೆಂಬುದು ಅವುಗಳಲ್ಲಿ ಒಂದು ಇದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಇಂದು ನಮ್ಮ ಸ್ವಾತಂತ್ರ್ಯಕ್ಕೂ ಐಕ್ಯತೆಗೂ ಗಂಡಾಂತರ ಬಂದಿದೆ. ಈ ಗಂಡಾಂತರ ನಿರ್ವಹಣೆಯ ಚಾರಿತ್ರಿಕ ಜವಾಬ್ದಾರಿ ನಮ್ಮದಾಗಿದೆ" ಎಂದರು.

ಸಮ್ಮೇಳನದ ಎರಡನೆಯ ದಿನದಂದು ರಾಜ್ಯಸಮಿತಿ ಮಂಡಿಸಿದ ವರದಿಯ ಮೇಲೆ ಚರ್ಚೆ ನಡೆಯಿತು. ಚರ್ಚೆಯಲ್ಲಿ ದಕ್ಷಿಣ ಕನ್ನಡದಿಂದ ಮಹಾಬಲ, ವಿ. ಬಿ. ನಾರಾಯಣ, ಶಿವಾನಂದ- ಬೆಂಗಳೂರು ಜಿಲ್ಲೆಯ ಶೈಲೇಶ್, ಬಿ. ಎಸ್. ಕೃಷ್ಣಮೂರ್ತಿ, ಕುಮಾರ್, ನಾರಾಯಣಪ್ಪ, ಕೋಲಾರ ಜಿಲ್ಲೆಯ ಕೆ. ವಿ. ಸತ್ಯನಾರಾಯಣ ಸ್ವಾಮಿ, ಪಿ. ಶ್ರೀನಿವಾಸ್, ಕೆ. ಹೆಚ್. ರಮಾಮಣಿ, ಕೆ. ಆರ್. ಶ್ರೀನಿವಾಸ ಗೌಡ - ಡಿ. ಎನ್. ಜಯರಾಮರೆಡ್ಡಿ, ಧಾರವಾಡ ಜಿಲ್ಲೆಯ ವಿ.ಜಿ.ಕಮ್ಮಾರ್ ಚಿದಾನಂದ ಮೂರ್ತಿ, ಕೊಡಗು ಜಿಲ್ಲೆಯ ಪ್ರಭು, ಎ. ಟಿ. ಕೃಷ್ಣ - ಮೈಸೂರು ಜಿಲ್ಲೆಯ ಮೋಹನ್, ಜಗನ್ನಾಥ್, ತುಮಕೂರು ಜಿಲ್ಲೆಯ ತಿಮ್ಮೇಗೌಡ - ಚಿತ್ರದುರ್ಗ ಜಿಲ್ಲೆಯ ಮಣಿ, ಭೀಮಣ್ಣ ರೆಡ್ಡಿ, - ಬೀದರ್ ಜಿಲ್ಲೆಯ ಸಂಗಶೆಟ್ಟಿ ಪಾಟೀಲ್, - ಹಾಸನ ಜಿಲ್ಲೆಯ ಪಾಲ್‌ಡಿ.ಸೋಜ,- ಬಿಜಾಪುರ ಜಿಲ್ಲೆಯ ಮಹಾಂತೇಶ್ - ರಾಯಚೂರು ಜಿಲ್ಲೆಯ ಗಂಗಾಧರ ಕುಷ್ಟಗಿ - ಚಿಕ್ಕಮಗಳೂರಿನ ಪ್ರಕಾಶ್ ಹಾಗೂ ಶಂಕರ ಕಾರ್ವೆ, ಎನ್.ಎಸ್. ಪ್ರಭಾಕರ್ ಮುಂತಾದವರು ಪಾಲ್ಗೊಂಡಿದ್ದರು. ನಂತರ 16 ನಿರ್ಣಯಗಳನ್ನು ಮಂಡಿಸಿದರು. ನಿರ್ಣಯಗಳಿಗೆ ಸಭೆ ಸೂಚಿಸಿದ ಸೇರ್ಪಡೆಗಳೊಂದಿಗೆ ಒಪ್ಪಿಗೆ ನೀಡಲಾಯಿತು.

ಸಮ್ಮೇಳನದ ಮೂರನೆಯ ದಿನದಂದುವರದಿಯಮೇಲಿನಚರ್ಚೆಗೆಉತ್ತರಿಸಿದ ಸಂಚಾಲಕ ಜಿ. ವಿ. ಶ್ರೀರಾಮರೆಡ್ಡಿಯವರು "ಯಾರೇ ಯುವಜನರು ಹುಟ್ಟುತ್ತಲೇ ರ‍್ಯಾಡಿಕಲ್ಸ್ ಆಗಿರುವುದಿಲ್ಲ. ಈ ಅವಲಕ್ಷಣ ಸಮಾಜದಲ್ಲಿ ಹಾಗೆ ನಿರೀಕ್ಷಿಸಲಾಗುವುದಿಲ್ಲ" ಎಂದು ಪ್ರಶ್ನೆ, ಟೀಕೆ, ವಿಮರ್ಶೆಗಳಿಗೆ ಉತ್ತರಿಸಿದರು. ಸಂಘಟನೆಯನ್ನು ಕುರಿತು ಮಾತನಾಡಿದರು. ಸಮಾರೋಪ ಭಾಷಣ ಮಾಡಿದ ಅಖಿಲ ಭಾರತ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಹನನ್‌ಮುಲ್ಲ "ಈ ಸಮ್ಮೇಳನ ಪ್ರೌಢವಾಗಿದೆ, ಶೈಕ್ಷಣಿಕವಾಗಿದೆ, ಐಕ್ಯ ಸಮ್ಮೇಳನವಾಗಿದೆ. ನಮ್ಮ ಕಾರ್ಯಕ್ರಮಗಳಿಂದ, ಧ್ಯೇಯೋದ್ದೇಶಗಳ ಮಾರ್ಗದರ್ಶನದಿಂದ ಮುಂದುವರೆಯಬೇಕೆಂದರು".

ಕೊನೆಯ ದಿನ ರಾಜ್ಯಸಮ್ಮೇಳನಕ್ಕೆ ರಾಜ್ಯ ರೈತಸಂಘದ ಪ್ರಧಾನ ಕಾರ್ಯದರ್ಶಿ ಪಿ. ರಾಮಚಂದ್ರರಾವ್, ಸಿ. ಐ. ಟಿ. ಯು ನ ಕಾಂ. ಸೂರ್ಯನಾರಾಯಣರಾವ್, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿ ಕಾಂ ಎಂ. ಕೆ. ಭಟ್ ಮೊದಲಾದವರು ಶುಭಕೋರಿದರು.

(ಕಡೇ ಪುಟನೋಡಿ)

ಪ್ರಜಾಪ್ರಭುತ್ವ ಶಕ್ತಿಗಳ ಮೇಲೆ ನಡೆಯುತ್ತಿರುವ ದಾಳಿಯ ಖಂಡನೆ

(2ನೇ ಪುಟದಿಂದ)

ಳನೇ ಅಖಿಲಭಾರತ ಸಮ್ಮೇಳನ

ರಾಜ್ಯಸಮಿತಿ ಸಭೆಯಲ್ಲಿ ಹಾಜರಿದ್ದ ಅಖಿಲಭಾರತ ಎಸ್. ಎಫ್. ಐ. ನ ಅಧ್ಯಕ್ಷ ಕಾಂ. ಬೇಬಿಯವರು ಡಿಸೆಂಬರ್ 25ರಿಂದ 27ರ ವರೆಗೆ ಮುಂಬೈನಲ್ಲಿ ನಡೆಯಲಿರುವ ಎಸ್. ಎಫ್.ಐ.ನ4ನೇಅಖಿಲಭಾರತ ಸಮ್ಮೇಳನದ ಬಗ್ಗೆ ವಿವರಣೆ ನೀಡಿದರು. ಈ ಸಮ್ಮೇಳನಕ್ಕೆ 1500 ಸದಸ್ಯರಿಗೆ ಒಬ್ಬರಂತೆ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಗುವುದೆಂದು ಕಾಂ. ಬೇಬಿ ತಿಳಿಸಿದರು. ಈ ಹಿನ್ನೆಲೆಯಲ್ಲಿ ರಾಜ್ಯದಾದ್ಯಂತ ಸದಸ್ಯತನವನ್ನು ಚುರುಕುಗೊಳಿಸಲು ರಾಜ್ಯಸಮಿತಿಯು ಎಲ್ಲಾ ಘಟಕಗಳಿಗೆ ಕರೆನೀಡಿದೆ.

ವಿಶೇಷ ಅಧಿವೇಶನ

ರಾಜ್ಯದಾದ್ಯಂತ ಕೆಲಸಕಾರ್ಯಗಳನ್ನು ಚುರುಕುಗೊಳಿಸಿ ಸಂಘಟನೆಯನ್ನು ಬಲಪಡಿಸಲು ರಾಜ್ಯಸಮಿತಿಯು ಡಿಸೆಂಬರ್ 8 ಮತ್ತು 9 ರಂದು ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ ವಿಶೇಷ ಅಧಿವೇಶನ ನಡೆಸಲು ತೀರ್ಮಾನಿಸಿದೆ. ಎಲ್ಲ ಜಿಲ್ಲೆಯನ್ನೊಳಗೊಂಡಂತೆ 60 ಪ್ರತಿನಿಧಿಗಳನ್ನು ಈ ಅಧಿವೇಶನಕ್ಕೆ ಗೊತ್ತುಪಡಿಸಲಾಗಿದೆ.

ರಾಜ್ಯಸಮಿತಿಯ ಕೊನೆಯ ದಿನವಾದ ಅಕ್ಟೋಬರ್ 18ರಂದು ಗಂಗಾವತಿಯ ಗಾಂಧೀಚೌಕದಲ್ಲಿ ಸಾರ್ವಜನಿಕ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಎಸ್. ಎಫ್. ಐ. ರಾಜ್ಯಸಮಿತಿಯ ಅಧ್ಯಕ್ಷ ಕಾಂ. ಜಯಕುಮಾರ್ ವಹಿಸಿದ್ದರು. ಸಭೆಯನ್ನುದ್ದೇಶಿಸಿ ಕಾಂ. ಎಂ. ಎ. ಬೇಬಿ, ರುದ್ರಪ್ಪಕಾಯಿ, ಬಸವರಾಜ್ ಮತ್ತು ಹೊಸಪೇಟೆಯ ಎಸ್. ಎಫ್. ಐ. ಸಂಚಾಲಕಿ ಕಾಂ. ಶಾಂತಕುಮಾರಿ ಮಾತನಾಡಿ ಸಂಘಟನೆಯ ಬೆಳವಣಿಗೆಗೆ ನೆರವಾಗಲು ಸಾರ್ವಜನಿಕರಿಗೆ ಕೇಳಿಕೊಂಡರು.

ಡಿ.ವೈ.ಎಫ್.ಐ. ಪ್ರಥಮ ಸಮ್ಮೇಳನ

ಸಂಪಾದಕೀಯ

(1ನೇ ಪುಟದಿಂದ)

ಇವನ್ನು ನೋಡಬಹುದು. ಅಲ್ಪಸಂಖ್ಯಾತ, ಹಿಂದುಳಿದ ಜನಾಂಗದವರಾದವರು ಮುಖ್ಯಮಂತ್ರಿಯಾಗಿ ಬಂದರು. ಆದು ಈಗಲೂ ಮುಂದುವರಿದಿದೆ. ಆದರೆ ಜಾತೀಯತೆ ಅಳಿದಿಲ್ಲ. ಅದಿನ್ನೂ ತೀವ್ರಗೊಂಡಿದೆ. ಎಲ್ಲೆಲ್ಲೂ ತಾಂಡವವಾಡುತ್ತಿದೆ.

ಎಷ್ಟೋ ದಶಕಗಳ ಹೋರಾಟದಿಂದ ಗಳಿಸಿದ ಕನ್ನಡ ರಾಜ್ಯದಲ್ಲಿ ಸಾಮಾನ್ಯ ಜನತೆಯ ಸ್ಥಿತಿಯಲ್ಲಿ ಯಾವ ಸುಧಾರಣೆಯನ್ನೂ ಕಾಣದಿರುವುದು ಶೋಚನೀಯವಾಗಿದೆ. ಇದರಲ್ಲಿ ಬದಲಾವಣೆಯಾಗಬೇಕಾದರೆ, ಸಮಾಜದಲ್ಲೇ ಮೂಲಭೂತ ಬದಲಾವಣೆಯಾಗಬೇಕಾಗಿದೆ. ನಮ್ಮ ಸಮಾಜದಲ್ಲಿರುವ ಶೋಷಣೆ ಕೊನೆಗಾಣಬೇಕಾಗಿದೆ. ಇಲ್ಲದಿದ್ದರೆ ಈಗಿರುವ ಬಡತನ, ದಾರಿದ್ರ್ಯ ಮುಂದುವರಿದು ಬಹುಭಾಗ ಜನತೆ ದಟ್ಟ ದರಿದ್ರ್ಯದಲ್ಲಿ ನರಳಬೇಕಾಗುತ್ತದೆ. ಇದನ್ನು ಕೊನೆಗಾಣಿಸುವುದು ಕನ್ನಡಿಗರ ಕರ್ತವ್ಯ.

ಏಕೀಕರಣ ಚಳುವಳಿಯಲ್ಲಿ ಕಮ್ಯೂನಿಸ್ಟ್ ಪಾರ್ಟಿ ಅಗ್ರಪಾತ್ರವಹಿಸಿದೆ. ಕಮ್ಯೂನಿಸ್ಟ್ ಪಾರ್ಟಿಯೊಂದೇ ಆರಂಭದಿಂದಲೂ ಕರ್ನಾಟಕ ಪ್ರಾಂತ ಸಮಿತಿ ಎಂದು ಒಂದೇ ಸಮಿತಿಯಾಗಿ ಕೆಲಸಮಾಡಿದೆ. ಇತರರೆಲ್ಲಾ ಮೈಸೂರಿಗೆ ಬೇರೆ, ಬೇರೆ ಪ್ರದೇಶಗಳಿಗೆ ಬೇರೆ ಸಂಘಟನೆ ಮಾಡಿದ್ದರು.

ಕಮ್ಯೂನಿಸ್ಟ್ ಪಾರ್ಟಿಯು ಪ್ರಜಾಪ್ರಭುತ್ವ ಹೋರಾಟದ ಅಂಗವಾಗಿ ಏಕೀಕರಣ ಚಳುವಳಿಯನ್ನು ನಡೆಸಿದೆ. ಇದರಿಂದಲೇ ಇತರ ಕನ್ನಡ ಪ್ರದೇಶಗಳನ್ನು ಹಿಂದಿನ ಮೈಸೂರಿನಲ್ಲಿ ವಿಲೀನಗೊಳಿಸಿ ಮೈಸೂರು ಮಹಾರಾಜರನ್ನು ಅವರ ತಲೆಮೇಲೆ ಹೊರಿಸುವ ಪಿತೂರಿಯನ್ನು ವಿಫಲಗೊಳಿಸಿತು.

ಕರ್ನಾಟಕದ ಜನತೆಯ ಹೋರಾಟವು ಇಡೀ ದೇಶದ ಜನತೆಯ ಹೋರಾಟದ ಅಂಗವಾಗಿದೆ. ನಮ್ಮ ರಾಜ್ಯದಲ್ಲಿ ಎಡ ಮತ್ತು ಪ್ರಜಾಭುತ್ವವಾದಿ ಶಕ್ತಿಗಳು ಸಾಕಷ್ಟು ಬೆಳೆದಿಲ್ಲ. ಆದರೂ ಇತ್ತೀಚೆಗೆ ನಮ್ಮ ರಾಜ್ಯದ ರೈತರೂ, ಕಾರ್ಮಿಕರೂ ಶೋಷಣೆಯ ವಿರುದ್ಧ ಹೋರಾಡಲು ಮುಂದೆ ಬರುತ್ತಿದ್ದಾರೆ. ಇದೊಂದು ಶುಭ ಚಿಹ್ನೆ. ವಿಜಯನಗರ ಸಾಮ್ರಾಜ್ಯದ ಗತ ವೈಭವವನ್ನೇ ಹೇಳಿಕೊಂಡರೆ ಸಾಲದು. ಪಂಪರನ್ನರ ನಾಡೆಂದೂ, ಕಿತ್ತೂರು ಚೆನ್ನಮ್ಮ, ಟಿಪ್ಪು ಮುಂತಾದ ವೀರರ ನಾಡೆಂದೂ ಹೇಳುವುದರಿಂದ ನಮ್ಮ ಸಮಸ್ಯೆ ಬಗೆಹರಿಯದು. ನಮ್ಮ ಜನ ಸಂಘಟಿತರಾಗಬೇಕು; ಅನ್ಯಾಯದ ವಿರುದ್ಧ ಶೋಷಣೆಯ ವಿರುದ್ಧ ಹೋರಾಡಲು ತಯಾರಾಗಬೇಕು.

ಕನ್ನಡನಾಡಿನ ವೀರ ಜನತೆ ನಮ್ಮ ರಾಜ್ಯದಲ್ಲೂ ಸುಖ ಸಮೃದ್ಧಿಯ, ಶೋಷಣೆ ಇಲ್ಲದ ಹೊಸ ಸಮಾಜವನ್ನು ಕಟ್ಟಲು ಮುಂದೆ ಬರುವವರೆಂದು ನಾವು ನಂಬುತ್ತೇವೆ.

ಕೆಚ್ಚೆದೆಯ ಕನ್ನಡಿಗರೇ ಎದ್ದೇಳಿ! ಬೆಳ್ಳಿಹಬ್ಬದ ಈ ಸಂದರ್ಭದಲ್ಲಿ ನಾಡಿನ ಜನತೆಗೆ ನಮ್ಮ ಶುಭಾಶಯಗಳನ್ನು ನೀಡುತ್ತಾ ನಮ್ಮ ಹೋರಾಟವನ್ನು ಮುಂದುವರಿಸೋಣ. ○

(7ನೇ ಪುಟದಿಂದ)

ಪದಾಧಿಕಾರಿಗಳು

ಮೂರನೆಯ ದಿನ ಮಧ್ಯಾಹ್ನದ ಅಧಿವೇಶನದಲ್ಲಿ ಸರ್ವಾನುಮತದಿಂದ ಆಯ್ಕೆಗೊಂಡ ರಾಜ್ಯಸಮಿತಿಯ ಪದಾಧಿಕಾರಿಗಳು ಕೆಳಗಿನಂತಿದ್ದಾರೆ.

1. ಬಿ. ಜಿ. ಕಮ್ಮಾರ್ ಅಧ್ಯಕ್ಷ, 2. ಜಿ.ವಿ. ಶ್ರೀರಾಮರೆಡ್ಡಿ ಪ್ರಧಾನ ಕಾರ್ಯದರ್ಶಿ, 3. ಮಹಾಬಲ ಒಡೇರ ಹೋಬಳಿ ಉಪಾಧ್ಯಕ್ಷ, 4. ಸಂಗಶೆಟ್ಟಿ ಪಾಟೀಲ್ ಸಹಕಾರ್ಯದರ್ಶಿ. 5. ತಿಮ್ಮೇಗೌಡ ಖಜಾಂಚಿ ಮತ್ತು 19 ಜನ ಸದಸ್ಯರು.

ಬಹಿರಂಗ ಸಭೆ

ಅಂದು ಸಂಜೆ (28-10-1981) ನೂತನವಾಗಿ ಆಯ್ಕೆಯಾದ ಡಿ.ವೈ.ಎಫ್.ಐ.ನ ರಾಜ್ಯಸಮಿತಿ ಅಧ್ಯಕ್ಷ ವಿ.ಜಿ. ಕಮ್ಮಾರ್ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯಿತು. ಅಖಿಲ ಭಾರತ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಪ್ರಧಾನಕಾರ್ಯದರ್ಶಿ ಹಸನ್‌ಮುಲ್ಲ ದೇಶದ ಆರ್ಥಿಕ ವ್ಯವಸ್ಥೆಯ ನ್ಯೂನತೆಗಳನ್ನು ವಿವರಿಸಿ ಡಿ. ವೈ. ಎಫ್. ಐ. ಸಂಘಟನೆಯ ಅಗತ್ಯವನ್ನು ಒತ್ತಿ ಹೇಳಿದರು.

ಮುಖ್ಯ ಭಾಷಣಕಾರರಾಗಿದ್ದ ದಲಿತ ಕವಿ ಸಿದ್ದಲಿಂಗಯ್ಯ ಯುವಜನರು ಹೊಸ ಮೌಲ್ಯಗಳಿಗಾಗಿ ಹೋರಾಡುವ ಚೈತನ್ಯವನ್ನು ಸಹಜವಾಗಿ ಉಳ್ಳವರು ಹೊಸ ಸಂಸ್ಕೃತಿಯ ಹುಟ್ಟಿಗೆ ಕೊಳೆತ ಮೌಲ್ಯಗಳ ನಿರ್ಮೂಲನಕ್ಕೆ ಸಕ್ರಿಯ ಪಾತ್ರವಹಿಸುವ ಈ ಯುವಜನಾಂಗ ಅಸ್ಪೃಶ್ಯತೆಯ ವಿರುದ್ಧ, ಜಾತೀಯತೆಯ ವಿರುದ್ಧ ಹೋರಾಡಬೇಕೆಂದರು.

ಸ್ವಾಗತ ಎಸ್. ಶಿವರಾಂ, ಜಿ.ವಿ. ಶ್ರೀರಾಮರೆಡ್ಡಿಯವರಿಂದ ವಂದನಾರ್ಪಣೆಗಳು ನಡೆದವು.

ಬೆಂಗಳೂರಿನಲ್ಲಿ ನಡೆದ ಈ ಸಮ್ಮೇಳನದ ಪ್ರತಿನಿಧಿಗಳು ಸಂಘಟನೆಯನ್ನು ಬಲಪಡಿಸುವ ಹುಮ್ಮಸ್ಸಿನಿಂದ ತಮ್ಮತಮ್ಮ ಸ್ಥಳಗಳಿಗೆ ತೆರಳಿದರು. ●

ಅಭಿನಂದನೆ

ಇತ್ತೀಚೆಗೆ ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾಗಿರುವ ಅಖಿಲ ಭಾರತ ಎಸ್.ಎಫ್.ಐ. ಪ್ರಧಾನ ಕಾರ್ಯದರ್ಶಿ ಕಾಂ. ನೇಪಾಲ್ ದೇವ್ ಭಟ್ಟಾಚಾರ್ಯ ಅವರನ್ನು ಎಸ್.ಎಫ್.ಐ. ರಾಜ್ಯಸಮಿತಿ ಅಭಿನಂದಿಸಿದೆ. ●

೨೫ ವರ್ಷಗಳ ಹಿಂದೆ

ಒನ್ ಬೈಟೂ ಬೇಡ

ಹರಿದು ಹಂಚಿಹೋಗಿದ್ದ ಕನ್ನಡನಾಡು 1956 ನವೆಂಬರ್ 1ರಂದು ಒಂದಾಯಿತು. ಕನ್ನಡ ಏಕೀಕರಣಕ್ಕಾಗಿ ಕಮ್ಯೂನಿಸ್ಟ್ ಪಕ್ಷ ಅವಿಶ್ರಾಂತವಾಗಿ ಶ್ರಮಿಸಿತ್ತು.


ಸ್ವಾರಸ್ಯವೆಂದರೆ ಇಂದು ನಾಡು ಒಂದಾಗುವುದನ್ನು ಕೆಲವು ಮುಖಂಡರು ಬಯಸಿರಲಿಲ್ಲ. ಫಜಲಾಲಿಯವರ ನೇತೃತ್ವದ ಕಮೀಷನ್ ಕರ್ನಾಟಕ ರಾಜ್ಯ ಒಂದಾಗುವುದನ್ನು ಶಿಫಾರಸು ಮಾಡಿತ್ತು. ಈ ಕಮೀಷನ್ನಿನ ವರದಿಯನ್ನು ಅಸೆಂಬ್ಲಿ (ಕೆಂಗಲ್ ಮುಖ್ಯಮಂತ್ರಿಯಾಗಿದ್ದಾಗ)ಯಲ್ಲಿ ಚರ್ಚಿಸುತ್ತಿದ್ದಾಗ ಏಕೀಕರಣವನ್ನು ಪ್ರತಿಭಟಿಸಿ ಮೂವರು ಕ್ಯಾಬಿನೆಟ್ ಸಚಿವರು ರಾಜೀನಾಮೆ ಕೊಟ್ಟಿದ್ದರು. ಈ ಮೂವರಲ್ಲಿ ಒಬ್ಬರು ಶ್ರೀಯುತ ಕಡಿದಾಳ್ ಮಂಜಪ್ಪನವರು.

ಏಕೀಕರಣವನ್ನು ವಿರೋಧಿಸಿ ಅಸೆಂಬ್ಲಿ ಎದುರು ಅನೇಕ ಮತಪ್ರದರ್ಶನಗಳೂ ನಡೆದಿದ್ದವು. ಅವಿಭಜಿತ ಕಮ್ಯೂನಿಸ್ಟ್ ಏಕೀಕರಣಕ್ಕಾಗಿ ಒತ್ತಾಯಿಸಿ ಪ್ರದರ್ಶನ ಏರ್ಪಡಿಸಿತ್ತು. ಹಳೇಮೈಸೂರು ಮತ್ತು ಕರ್ನಾಟಕ ಎಂಬೆರಡು ಬೇರೆಬೇರೆ ರಾಜ್ಯಗಳಾಗಬೇಕು ಎಂದು ಒತ್ತಾಯಿಸಿ ಮಂಡ್ಯದಿಂದ ಭಾರೀ ಮೆರವಣಿಗೆಯನ್ನು ಕೆಲವರು ಏರ್ಪಡಿಸಿದ್ದರು. ಮಂಡ್ಯದ ಮೆರವಣಿಗೆಕಾರರಿಗೂ, ಏಕೀಕರಣಕ್ಕಾಗಿ ಒತ್ತಾಯಿಸುತ್ತಿದ್ದ ಕಮ್ಯೂನಿಸ್ಟ್ ಪಕ್ಷದ ಕಾರ್ಯಕರ್ತರಿಗೂ ಮುಖಾಮುಖಿಯಾಗಿ ಅನೇಕ ಕಮ್ಯೂನಿಸ್ಟ್ ಪಕ್ಷದ ಕಾರ್ಯಕರ್ತರು ಗಾಯಗೊಂಡಿದ್ದರು.

ಎರಡು ರಾಜ್ಯಗಳ ಪ್ರಯತ್ನಗಳನ್ನು ಪ್ರತಿಭಟಿಸಿ, ಕರ್ನಾಟಕ ಏಕೀಕರಣಕ್ಕೆ ಒತ್ತಾಯಿಸಿ ಕಮ್ಯೂನಿಸ್ಟ್ ಪಕ್ಷ ಬೆಂಗಳೂರಿನ ಸುಭಾಷ್ ಮೈದಾನದಲ್ಲಿ ಬೃಹತ್ ಬಹಿರಂಗ ಸಭೆಯನ್ನು ಏರ್ಪಡಿಸಿತ್ತು.

ಈ ಬಹಿರಂಗ ಸಭೆಯನ್ನುದ್ದೇಶಿಸಿ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಕಾಂ. ಎನ್. ಎಲ್. ಉಪಾಧ್ಯಾಯರು ಮಾತನಾಡುತ್ತಾ "ಹಳೇ ಮೈಸೂರು ವಿಭಾಗದ ಜನತೆಗೆ ಕಾಫಿಯನ್ನು ಬೈಟೂ ಕುಡಿವ ಅಭ್ಯಾಸ. ಇದೇ ನಿಯಮವನ್ನು ಅನ್ವಯಿಸಿ ಎರಡು ರಾಜ್ಯಗಳಿಗೆ ಒತ್ತಾಯಿಸುವ ಪ್ರಯತ್ನಗಳನ್ನು ಹಳೇ ಮೈಸೂರಿನ ಮುಖಂಡರು ಕೈಬಿಡಬೇಕು" ಎಂದು ನಗೆ ಚಟಾಕಿ ಹಾರಿಸಿದ್ದರು.

ಕವಿಪುಂಗವ ಬೇಂದ್ರೆ ನಿಧನ



ನಾಡಿನ ಖ್ಯಾತ ಕವಿ ದ. ರಾ. ಬೇಂದ್ರೆಯವರು ಸೋಮವಾರ ಮಧ್ಯಾಹ್ನ ಮುಂಬಯಿಯಲ್ಲಿ ನಿಧನರಾಗಿದ್ದಾರೆ. ದ. ರಾ. ಬೇಂದ್ರೆಯವರ ನಿಧನ ಕನ್ನಡ ಸಾರಸ್ವತ ಕ್ಷೇತ್ರಕ್ಕೆ ತುಂಬಲಾರದ ಹಾನಿಯಾಗಿದೆ.

ಆರೇಳು ದಶಕಗಳ ದೀರ್ಘಕಾಲ ಕನ್ನಡ ಕಾರ್ಯವನ್ನು ಆರಾಧಿಸಿದ ಅಂಬಿಕಾತನಯದತ್ತರು. ಕಾವ್ಯಪ್ರೇಮಿಗಳನ್ನು ತನ್ಮಯರನ್ನಾಗಿಸಿದ ಗಾರುಡಿಗರಾಗಿದ್ದರು. ಜೀವನದ ಎಲ್ಲ ಮುಖಗಳಿಗೆ ಕಾವ್ಯತಂತಿಯನ್ನು ಮಿಡಿದ ಮಾಂತ್ರಿಕರಾಗಿದ್ದರು.

ಗೌರವ ಡಾಕ್ಟರೇಟ್ ಪದವಿ. ಕೇಂದ್ರ ಸಾಹಿತ್ಯ ಅಕೆಡೆಮಿ ಪ್ರಶಸ್ತಿ, ನಾಕುತಂತಿ ಕವನ ಸಂಕಲನಕ್ಕೆ ಭಾರತೀಯ ಜ್ಞಾನಪೀಠ ಪ್ರಶಸ್ತಿ ಮುಂತಾದ ಪದವಿ ಪ್ರಶಸ್ತಿಗಳು ದ. ರಾ. ಬೇಂದ್ರೆಯವರಿಗೆ ಲಭ್ಯವಾಗಿದ್ದವು.

ಕಾವ್ಯಲೋಕದ ಯುಗಪುರುಷ ಡಾ॥ ದ. ರಾ. ಬೇಂದ್ರೆಯವರ ನಿಧನಕ್ಕೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ತನ್ನ ಅತೀವ ದುಃಖ ವ್ಯಕ್ತಪಡಿಸಿದೆ. ಅವರ ಕುಟುಂಬದ ದುಃಖದಲ್ಲಿ ಪಾಲ್ಗೊಳ್ಳುತ್ತದೆ.

ನವೆಂಬರ್ 3 ರಂದು ಅಖಿಲಭಾರತ ಪ್ರತಿಭಟನೆ

ನ್ಯಾಷನಲ್ ಕ್ಯಾಂಪೇನ್ ಸಮಿತಿ (ಎನ್.ಸಿ.ಸಿ.)ಯ ಕರೆಯ ಮೇರೆಗೆ ನವೆಂಬರ್ 3ರಂದು ರಾಷ್ಟ್ರದಾದ್ಯಂತ ಪ್ರತಿಭಟನೆ ನಡೆಯಲಿದೆ. ಕರ್ನಾಟಕ ರಾಜ್ಯದಲ್ಲಿ ನವೆಂಬರ್ 3ರಂದು ಸಾರ್ವತ್ರಿಕ ಮುಷ್ಕರ ನಡೆಸಲು ಈ ಹಿಂದೆ ತೀರ್ಮಾನಿಸಿದ್ದು, ಅದನ್ನೀಗ ಮುಂದೂಡಲಾಗಿದೆ. ನವೆಂಬರ್ 3ರಂದು ರಾಜ್ಯದ ಎಲ್ಲಾ ಭಾಗಗಳಲ್ಲೂ ಕಾರ್ಮಿಕ ಸಂಘಟನೆಗಳಿಂದ ಪ್ರತಿಭಟನಾ ಕಾರ್ಯಕ್ರಮ ನಡೆಯಲಿದೆ. ಅದನ್ನು ಯಶಸ್ವಿಗೊಳಿಸಲು ಸಿ.ಐ.ಟಿ.ಯು. ರಾಜ್ಯ ಸಮಿತಿಯು ಕರೆ ಈಯುತ್ತದೆ.

ಸಿ. ನಂಜುಂಡಪ್ಪ
ಪ್ರಧಾನ ಕಾರ್ಯದರ್ಶಿ
ಸಿ.ಐ.ಟಿ.ಯು. ರಾಜ್ಯಸಮಿತಿ

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office : L-56, K. V. Temple Street, Sultanpet Bangalore-560 053. Phone-24154
EDITOR : M. K. BHAT